# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಫೆಬ್ರವರಿ 19, 2021

ಸಂಪುಟ : 47 ಸಂಚಿಕೆ : 291 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com





ರಾಜ್ಯದಲ್ಲೇ ಪ್ರಪ್ರಥಮ ಬಾರಿಗೆ ದಾವಣಗೆರೆ ಮಹಾನಗರ ಪಾಲಿಕೆಯಿಂದ
ಮಹಾಪೌರರಾದ **ಶ್ರೀ ಬಿ.ಜಿ. ಅಜಯ್‌ಕುಮಾರ್** ಅವರ ನೇತೃತ್ವದಲ್ಲಿ ನಡೆಯುತ್ತಿರುವ
'ಮನೆಯ ಬಾಗಿಲಿಗೆ ಮಹಾನಗರ ಪಾಲಿಕೆ' ಕಾರ್ಯಕ್ರಮದ ಸಮಾರೋಪ ಸಮಾರಂಭ.
ದಿನಾಂಕ : 20-02-2021ನೇ ಶನಿವಾರ ಬೆಳಿಗ್ಗೆ 10-00 ರಿಂದ ಸಂಜೆ 5-00 ರವರೆಗೆ, ಸ್ಥಳ : ಹೈಸ್ಕೂಲ್ ಮೈದಾನ, ಪಿ.ಜೆ. ಬಡಾವಣೆ, ದಾವಣಗೆರೆ.

ಮನೆಯ ಬಾಗಿಲಿಗೆ ಮಹಾನಗರ ಪಾಲಿಕೆ


## ಪಿಂಚಣಿಯಿಂದ ಪ್ಲಾಸ್ಟಿಕ್ ವರೆಗೆ ದೂರುಗಳು

### ಡಿಸಿ ಜನಸ್ಪಂದನೆ ಪುನರಾರಂಭ, 50ಕ್ಕೂ ಹೆಚ್ಚು ದೂರು ಸ್ವೀಕಾರ



ಚನ್ನಗಿರಿ ತಾಲ್ಲೂಕಿನಿಂದ ಬಂದಿದ್ದ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ತ್ಯಾವಣಿಗೆ ಹಾಗೂ ಕೆರೆಬಿಳಚಿಗಳಿಂದ ದಾವಣಗೆರೆಗೆ ಬಸ್ ಸೌಲಭ್ಯ ಕಲ್ಪಿಸುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಜನಸ್ಪಂದನದ ವೇಳೆ ಮನವಿ ಸಲ್ಲಿಸುತ್ತಿದ್ದಾರೆ.

ದಾವಣಗೆರೆ, ಫೆ. 18 - ಬಹುತೇಕ ಒಂದು ವರ್ಷದಿಂದ ನಿಂತಿದ್ದ ಜಿಲ್ಲಾಧಿಕಾರಿಗಳ ಜನಸ್ಪಂದನ ಸಭೆ ಗುರುವಾರದಿಂದ ಪುನರಾರಂಭವಾಗಿದ್ದು, ಮೊದಲ ದಿನ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ 50ಕ್ಕೂ ಹೆಚ್ಚು ಜನರು ತಮ್ಮ ಅಹವಾಲುಗಳನ್ನು ಸಲ್ಲಿಸಿದ್ದಾರೆ. ಸರ್ಕಾರಿ ಜಾಗದ ಒತ್ತುವರಿಯಿಂದ ಹಿಡಿದು ಪಿಂಚಣಿ ತೊಂದರೆ, ಬಸ್ ಸಮಸ್ಯೆಗಳವರೆಗೆ ಹತ್ತು ಹಲವು ವಿಷಯಗಳ ಬಗ್ಗೆ ಜನರು ಜಿಲ್ಲಾಧಿಕಾರಿಗಳ ಗಮನ ಸೆಳೆದಿದ್ದಾರೆ.

ಆರಂಭದಲ್ಲಿ ಚನ್ನಗಿರಿ ತಾಲ್ಲೂಕಿನಿಂದ ಜಿಲ್ಲಾಧಿಕಾರಿ ಕಚೇರಿಗೆ ಬಂದಿದ್ದ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ತ್ಯಾವಣಿಗೆ ಹಾಗೂ ಕೆರೆಬಿಳಚಿಗಳಿಂದ ದಾವಣಗೆರೆಗೆ ಬರಲು ಬೆಳಿಗ್ಗೆ ಹಾಗೂ ಸಂಜೆ ವೇಳೆ ಬಸ್ ಸೌಲಭ್ಯ ಕಲ್ಪಿಸಬೇಕೆಂದು ಮನವಿ ಮಾಡಿಕೊಂಡರು. ನಾಳೆಯಿಂದಲೇ ಬಸ್‌ಗೆ ವ್ಯವಸ್ಥೆ ಮಾಡುವಂತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ಸಿದ್ದೇಶ್ವರ ಹೆಬ್ಬಾರ್‌ಗೆ ಜಿಲ್ಲಾಧಿಕಾರಿ ಬೀಳಗಿ **(4ನೇ ಪುಟಕ್ಕೆ)**

#### ಸಕಾಲ ಪಾಲಿಸದ ಇಲಾಖೆಗಳು

**ಹಲವಾರು ಇಲಾಖೆಗಳು ಸಕಾಲದಡಿ ಅರ್ಜಿ ಸ್ವೀಕರಿಸುತ್ತಿಲ್ಲ. ಬಾಕಿ ಇರುವ ಸಕಾಲ ಅರ್ಜಿಗಳನ್ನು ತ್ವರಿತವಾಗಿ ಬಗೆಹರಿಸುತ್ತಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಶಿಕ್ಷಣ ಇಲಾಖೆ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಲೋಕೋಪಯೋಗಿ, ಅಬಕಾರಿ, ಅರಣ್ಯ, ಜಲ ಸಂಪನ್ಮೂಲ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಸಕಾಲದಡಿಯಲ್ಲಿ ಅರ್ಜಿ ಸ್ವೀಕಾರ ಆಗುತ್ತಿಲ್ಲ ಎಂದವರು ಹೇಳಿದ್ದಾರೆ.**

## ಮೆಡಿಕಲ್ ಸೀಟು ಮಾರಾಟ ದಂಧೆ

### ಐ.ಟಿ. ದಾಳಿಯಲ್ಲಿ 400 ಕೋಟಿ ರೂ. ಕಪ್ಪು ಹಣ ಪತ್ತೆ

ನವದೆಹಲಿ, ಫೆ. 18 – ಕರ್ನಾಟಕದ ಹಲವು ವೈದ್ಯಕೀಯ ಕಾಲೇಜುಗಳಲ್ಲಿ ಅಕ್ರಮ ನಡೆಯುತ್ತಿರುವುದನ್ನು ಆದಾಯ ತೆರಿಗೆ ಇಲಾಖೆ ಪತ್ತೆ ಮಾಡಿದ್ದು, ಕ್ಯಾಪಿಟೇಷನ್ ಶುಲ್ಕದ ಹೆಸರಿನಲ್ಲಿ 400 ಕೋಟಿ ರೂ. ಕಪ್ಪು ಹಣ ಸಂಗ್ರಹಿಸಿರುವುದನ್ನು ಬಯಲಿಗೆಳೆದಿದೆ.

ಇಲಾಖೆಯ ನೀತಿ ನಿರೂಪಣಾ ಸಂಸ್ಥೆಯಾದ ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸಸ್ (ಸಿ.ಬಿ.ಡಿ.ಟಿ.) ಈ ವಿಷಯ ತಿಳಿಸಿದೆ. ಬೆಂಗಳೂರು ಹಾಗೂ ಮಂಗಳೂರುಗಳಲ್ಲಿ ಒಂಭತ್ತು ಪ್ರಮುಖ ಟ್ರಸ್ಟ್‌ಗಳು ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳೂ ಸೇರಿದಂತೆ ಹಲವಾರು ಶಿಕ್ಷಣ ಸಂಸ್ಥೆಗಳ ಮೇಲೆ ಬುಧವಾರ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿತ್ತು.

ಕರ್ನಾಟಕ ಹಾಗೂ ಕೇರಳಗಳ 56 ತಾಣಗಳ ಮೇಲೆ ಶೋಧ ನಡೆಸಲಾಗಿತ್ತು. ಇದುವರೆಗೂ 402.78 ಕೋಟಿ ರೂ.ಗಳ ಅಕ್ರಮ ಕ್ಯಾಪಿಟೇಷನ್ ಶುಲ್ಕ ಪಡೆದಿರುವುದು ಪತ್ತೆಯಾಗಿದೆ. ಆನ್‌ಲೈನ್ ಪ್ರವೇಶ ಪ್ರಕ್ರಿಯೆಯಲ್ಲಿ ಅಕ್ರಮ ಎಸಗಿ ಸಂಗ್ರಹಿಸಲಾದ ಈ ಹಣದ ಬಗ್ಗೆ ಆದಾಯ ತೆರಿಗೆ ಇಲಾಖೆಗೆ ಮಾಹಿತಿ ನೀಡಿರಲಿಲ್ಲ ಎಂದು ಸಿ.ಬಿ.ಡಿ.ಟಿ. ಪ್ರಕಟಣೆಯಲ್ಲಿ ತಿಳಿಸಲಾಗಿದೆ.

**ವೈದ್ಯಕೀಯ ಕಾಲೇಜುಗಳಿಂದ ಪ್ರವೇಶದಲ್ಲಿ ಅವ್ಯವಹಾರ, ಹಣ ಕೊಟ್ಟವರಿಗೆ ಸೀಟಿನ ಜೊತೆಗೆ ಪಾಸಿಗೂ ವ್ಯವಸ್ಥೆ**

15.09 ಕೋಟಿ ರೂ. ನಗದು ಹಾಗೂ 30 ಕೋಟಿ ರೂ. ಮೌಲ್ಯದ 81 ಕೆ.ಜಿ. ಬಂಗಾರದ ಆಭರಣ, 50 ಕ್ಯಾರೆಟ್ ವಜ್ರ ಹಾಗೂ 40 ಕೆ.ಜಿ. ಬೆಳ್ಳಿಯನ್ನು ಟ್ರಸ್ಟಿಗಳ ನಿವಾಸಗಳಿಂದ ವಶಪಡಿಸಿಕೊಳ್ಳಲಾಗಿದೆ. ಈ ಹಣಕ್ಕೆ ಯಾವುದೇ ದಾಖಲೆ ಒದಗಿಸಿಲ್ಲ.

ಘಾನಾದಲ್ಲಿ 2.39 ಕೋಟಿ ರೂ.ಗಳ ವಿದೇಶಿ ಆಸ್ತಿ ಹೊಂದಿರುವುದೂ ತನಿಖೆಯಲ್ಲಿ ಬಯಲಾಗಿದೆ. 35 ಐಷಾರಾಮಿ ಕಾರುಗಳು ಬೇನಾಮಿ ಹೆಸರಿನಲ್ಲಿದ್ದದ್ದೂ ಸಹ ಬಯಲಿಗೆ ಬಂದಿದೆ ಎಂದು ಸಿ.ಬಿ.ಡಿ.ಟಿ. ಹೇಳಿದೆ.

ವೈದ್ಯಕೀಯ ಪ್ರವೇಶಕ್ಕೆ ಪಾರದರ್ಶಕ ವ್ಯವಸ್ಥೆ ತರಲು ರೂಪಿಸಲಾಗಿದ್ದ ನೀಟ್ ಅನ್ನು ಟ್ರಸ್ಟಿಗಳು ಹಾಗೂ ಸಂಸ್ಥೆ ನಡೆಸುವ ಕೆಲವರು ಸೇರಿಕೊಂಡು ತಿರುಚಿದ್ದಾರೆ. ಏಜೆಂಟರು ಹಾಗೂ ಉನ್ನತ ರ್‍ಯಾಂಕ್ ಪಡೆದ ಹಲವು ಅಭ್ಯರ್ಥಿಗಳು ಈ ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆ.

ಮೊದಲ ಹಂತದಲ್ಲಿ ನೀಟ್ ಪರೀಕ್ಷೆಯಲ್ಲಿ ಉನ್ನತ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು ಭಾಗಿಯಾಗುತ್ತಿದ್ದರು. ಈ ವಿದ್ಯಾರ್ಥಿಗಳು ಬೇರೆ ರಾಜ್ಯಗಳಲ್ಲಿ ಈಗಾಗಲೇ ಸೀಟು **(2ನೇ ಪುಟಕ್ಕೆ)**

## ಅಮಿತಾಬ್, ಅಕ್ಷಯ್ ಕುಮಾರ್ ಚಿತ್ರಗಳ ಪ್ರದರ್ಶನ ತಡೆ ಎಚ್ಚರಿಕೆ

**ತೈಲ ಬೆಲೆ ಏರಿಕೆ ಬಗ್ಗೆ ಮೌನವಾಗಿರುವುದಕ್ಕೆ ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ಪಟೋಲೆ ಎಚ್ಚರಿಕೆ**

ಮುಂಬೈ, ಫೆ. 18 - ಬಾಲಿವುಡ್ ನಟರಾದ ಅಮಿತಾಬ್ ಬಚ್ಚನ್ ಹಾಗೂ ಅಕ್ಷಯ್ ಕುಮಾರ್ ಅವರು ಇಂಧನ ಬೆಲೆ ಏರಿಕೆ ಕುರಿತು ಮೌನವಾಗಿರುವುದನ್ನು ಪ್ರಶ್ನಿಸಿರುವ ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ, ಅವರ ಚಿತ್ರಗಳ ಚಿತ್ರೀಕರಣ ಹಾಗೂ ಪ್ರದರ್ಶನವನ್ನು ತಡೆಯುವುದಾಗಿ ಎಚ್ಚರಿಕೆ ನೀಡಿದ್ದಾರೆ. ಖಾಸಗಿ ಸುದ್ದಿಸಂಸ್ಥೆಯೊಂದಿಗೆ ಮಾತ ನಾಡುತ್ತಿದ್ದ ಅವರು, ಅಮಿತಾಬ್ ಬಚ್ಚನ್ **(4ನೇ ಪುಟಕ್ಕೆ)**

## ಲಸಿಕೆ ಪಡೆಯದಿದ್ದರೆ ಸರ್ಕಾರಿ ಸೌಲಭ್ಯದ ಕಡಿತವಿಲ್ಲ: ಡಿಸಿ



ದಾವಣಗೆರೆ, ಫೆ. 18 - ಆರೋಗ್ಯ ವಲಯ ಹಾಗೂ ಮುಂಚೂಣಿ ವಲಯಗಳಲ್ಲಿ ಕಾರ್ಯ ನಿರ್ವಹಿಸುವವರು ಕೊರೊನಾ ಲಸಿಕೆ ಪಡೆಯದೇ ಇದ್ದರೆ ಸರ್ಕಾರಿ ಸೌಲಭ್ಯ ಕಡಿತಗೊಳಿಸುವುದಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸ್ಪಷ್ಟನೆ ನೀಡಿದ್ದಾರೆ.

ಆರೋಗ್ಯ ಇಲಾಖೆ ಆಯುಕ್ತ ಡಾ. ತ್ರಿಲೋಕಚಂದ್ರ ಅವರು ನಿನ್ನೆ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಮಾತನಾಡುತ್ತಾ, ಲಸಿಕೆ ಪಡೆಯದ **(4ನೇ ಪುಟಕ್ಕೆ)**

## 2ಎಗೆ ಪಂಚಮಸಾಲಿ ಸೇರ್ಪಡೆ: ಕುರುಬ ಸಂಘದ ಪ್ರತಿಭಟನೆ

ಬೆಂಗಳೂರು, ಫೆ. 18 - ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗಕ್ಕೆ ಸೇರಿಸಬಾರದು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘ ಒತ್ತಾಯಿಸುತ್ತಿದೆ.

2ಎ ಮೀಸಲಾತಿ ಪಟ್ಟಿಗೆ ಯಾವುದೇ ಆರ್ಥಿಕವಾಗಿ, ಸಾಮಾಜಿಕವಾಗಿ, ಮತ್ತು ಶೈಕ್ಷಣಿಕವಾಗಿ ಮುಂದುವರೆದ ಜಾತಿಗಳನ್ನು ಸೇರಿಸಬಾರದೆಂದು ನಾಳೆ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ. ಕುರುಬರ ಸಮಾಜವನ್ನು ಎಸ್‌ಟಿ ಮೀಸಲಾತಿಗೆ ಸೇರ್ಪಡೆ ಮಾಡಲು ಕುಲಶಾಸ್ತ್ರ ಅಧ್ಯಯನವನ್ನು ಸರ್ಕಾರ ಕೂಡಲೇ ತರಿಸಿ, ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕೆಂಬುದೂ ಸೇರಿದಂತೆ ಹಲವು ಬೇಡಿಕೆಗಳನ್ನಿಟ್ಟುಕೊಂಡು ನಾಳೆ ಪ್ರತಿಭಟನೆ ನಡೆಸುತ್ತಿದೆ.

## ಸರ್ಕಾರಿ ಗೋದಾಮುಗಳಲ್ಲಿ ಧಾನ್ಯ ಸಂಗ್ರಹಕ್ಕೆ ಅವಕಾಶ

ಬೆಂಗಳೂರು, ಫೆ. 18 - ಮಾರುಕಟ್ಟೆಯಲ್ಲಿ ಬೆಳೆಗೆ ಬೆಲೆ ದೊರೆಯದಿದ್ದರೆ, ರೈತರು ತಮ್ಮ ದಾಸ್ತಾನನ್ನು ಸರ್ಕಾರದ ಅಧೀನದ ಗೋದಾಮುಗಳಲ್ಲಿ ಸಂಗ್ರಹ ಮಾಡಬಹುದು ಎಂದು ಸಹಕಾರಿ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ.

ಕೃಷಿಕರಿಂದ ಶೇಖರಣೆ ಮಾಡಿದ ದಾಸ್ತಾನಿಗೆ ಸಂಗ್ರಹಣಾ ಶುಲ್ಕದಲ್ಲಿ ಶೇ. 20 ರಷ್ಟು ಹಾಗೂ ಪರಿಶಿಷ್ಟ ಜಾತಿ ಪಂಗಡದವರಿಗೆ ಶೇ. 25ರಷ್ಟು ರಿಯಾಯಿತಿ ಸಹ ದೊರೆಯಲಿದ್ದು, ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತಾ ಬಂದಿದೆ ಎಂದವರು ಹೇಳಿದ್ದಾರೆ. ಇದಲ್ಲದೆ ರಾಜ್ಯಾದ್ಯಂತ ಇರುವ ನಿಗಮದ ಉಗ್ರಾಣ ಕೇಂದ್ರಗಳಲ್ಲಿ **(4ನೇ ಪುಟಕ್ಕೆ)**

## ರೈಲ್ವೆ ಸಂಚಾರದ ಮೇಲೆ ಪರಿಣಾಮವಾಗಿಲ್ಲ : ಸಚಿವಾಲಯ

**ದೇಶದ ಹಲವೆಡೆ ರೈಲು ತಡೆ**

ನವದಹೆಲಿ, ಫೆ. 18 – ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ಧ ಹೋರಾಟ ನಡೆಸುತ್ತಿರುವ ರೈತರು, ಗುರುವಾರ ದೇಶದ ಹಲವೆಡೆ ರೈಲು ತಡೆ ನಡೆಸಿದ್ದಾರೆ. ರೈತರ ಈ ಪ್ರತಿಭಟನೆಯಿಂದ ರೈಲ್ವೆ ಸೇವೆಗಳ ಮೇಲೆ ಹೆಚ್ಚೇನೂ ಪರಿಣಾಮವಾಗಿಲ್ಲ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

ಪಂಜಾಬ್ ಹಾಗೂ ಹರಿಯಾಣದ ಹಲವೆಡೆ ರೈತರು ರೈಲು ಹಳಿಗಳ ಮೇಲೆ ಮಲಗುವ ಮೂಲಕ ಕೆಲವು ಮಾರ್ಗಗಳಲ್ಲಿ ಸಾಮಾನ್ಯ ರೈಲು ಸಂಚಾರಕ್ಕೆ ಅಡ್ಡಿಪಡಿಸಿದರು. ಉತ್ತರ ಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕಗಳ ಹಲವೆಡೆ ರೈತರು ಪ್ರತಿಭಟನೆ ನಡೆಸಿದ್ದಾರೆ.

ಆದರೆ, ಉಳಿದ ಬಹುತೇಕ ರಾಜ್ಯಗಳಲ್ಲಿ ಪ್ರತಿಭಟನೆಗೆ ಹೆಚ್ಚೇನೂ ಸ್ಪಂದನೆ ದೊರೆತಿಲ್ಲ. ರೈತರ ಹೋರಾಟಕ್ಕೆ ದೇಶಾದ್ಯಂತ **(4ನೇ ಪುಟಕ್ಕೆ)**

## ಮಾ.8 ರಂದು ಬಜೆಟ್ ಮಂಡನೆ

### ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ 2241 ಕಿ ಮೀ ರಸ್ತೆ ನಿರ್ಮಾಣ

ಬೆಂಗಳೂರು, ಫೆ. 18 - ಬರುವ ಮಾರ್ಚ್ 8 ರಂದು 2021-2022 ನೇ ಸಾಲಿನ ಬಜೆಟ್ ಮಂಡನೆಯಾಗಲಿದೆ ಎಂದು ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಗುರುವಾರ ಬೆಂಗಳೂರಿನಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿವೇಶನ ಮಾ. 4 ಕ್ಕೆ ಆರಂಭವಾಗಲಿದೆ. ಮಾ. 4 ಮತ್ತು 5 ರಂದು 'ಒಂದು ದೇಶ... ಒಂದು ಚುನಾವಣೆ' ಕುರಿತು ಚರ್ಚೆ ನಡೆಯಲಿದೆ. ಈ ವಿಷಯದ ಕುರಿತು ಚರ್ಚೆ ನಡೆಸುವಂತೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸರ್ಕಾರಕ್ಕೆ ಮನವಿ ಮಾಡಿದ್ದರು. ಈ ಮನವಿ ಮೇರೆಗೆ ಎರಡು ದಿನಗಳ ಕಾಲ ಅಂದರೆ ಮಾ. 4 ಮತ್ತು 5 ರಂದು ಸುದೀರ್ಘ ಚರ್ಚೆ ನಡೆಯಲಿದೆ ಎಂದರು.

ಇದುವರೆಗೆ ರಾಜ್ಯದಲ್ಲಿ 1,35,754 ಕೋವಿಡ್ ರೋಗಿಗಳಿಗೆ ಸರ್ಕಾರದ ವತಿಯಿಂದ ಚಿಕಿತ್ಸೆ ನೀಡಲಾಗಿದೆ. ಅದಕ್ಕಾಗಿ 620 ಕೋಟಿ ರೂ. ಹಣ ಖರ್ಚು ಮಾಡಲಾಗಿದೆ. ಆದರೆ ಮಾರ್ಚ್ 31ರವರೆಗೆ ಇನ್ನಷ್ಟು ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಬೇಕಾಗಿದೆ. ಇದಕ್ಕಾಗಿ ಹೆಚ್ಚುವರಿಯಾಗಿ 80 ಕೋಟಿ ರೂಪಾಯಿಗಳ ಅಗತ್ಯವಿದೆ. ಹಾಗಾಗಿ 80 ಕೋಟಿ ರೂಪಾಯಿ ಪಡೆಯುವುದು ಸೇರಿದಂತೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆಯಲಾಯಿತು ಎಂದು ಸಚಿವ ಬೊಮ್ಮಾಯಿ ಹೇಳಿದ್ದಾರೆ.

ಗ್ರಾಮೀಣ ಅಭಿವೃದ್ಧಿ ಇಲಾಖೆಯ ವತಿಯಿಂದ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 1445 ಕೋಟಿ ರೂಪಾಯಿ ವೆಚ್ಚದಲ್ಲಿ 2241 ಕಿ.ಮೀ. ರಸ್ತೆ ನಿರ್ಮಾಣಕ್ಕೆ ಅನುಮೋದನೆ ನೀಡಲಾಯಿತು ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

ಮೀಸಲಾತಿಗಾಗಿ ಹಲವು ಸಮುದಾಯದವರು ನಡೆಸುತ್ತಿರುವ ಹೋರಾಟ ಸರ್ಕಾರದ **(4ನೇ ಪುಟಕ್ಕೆ)**

## ಡಾ|| ಡಿ.ಎಂ.ಜೆ. ಶಿವಾನಂದ ನಿಧನ




ಖ್ಯಾತ ಅನಸ್ತೇಷಿಯ ತಜ್ಞ SSIMS&RC ಹಾಗೂ JJMMCಯ ನಿವೃತ್ತ ಪ್ರಾಧ್ಯಾಪಕ

**ಡಾ|| ಡಿ.ಎಂ.ಜೆ ಶಿವಾನಂದರವರು**

ದಿನಾಂಕ : 18.2.21ರ ಗುರುವಾರ ಮಧ್ಯಾಹ್ನ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 76 ವರ್ಷ ವಯಸ್ಸಾಗಿತ್ತು. ಅವರು ಪತ್ನಿ, ಮಗ ಡಾ|| ಡಿ. ಎಸ್. ಪ್ರವೀಣ್, ಸೊಸೆ, ಮೊಮ್ಮಗ ಮತ್ತು ಅಪಾರ ಬಂಧು ಬಳಗವನ್ನು ಅಗಲಿರುತ್ತಾರೆ. ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ದಾವಣಗೆರೆಯ ಸ್ವಗೃಹದಲ್ಲಿ ದಿನಾಂಕ: 19-2-21ರ ಶುಕ್ರವಾರ ಬೆಳಗ್ಗೆ 11.30 ವರೆಗೆ ಇರಿಸಿ, ನಂತರ ಮಧ್ಯಾಹ್ನ 2.00 ಗಂಟೆಗೆ ಬೀರೂರಿನಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಗುವುದು.

ಇಂತಿ ದು:ಖತಪ್ತ ಕುಟುಂಬ ವರ್ಗ

## ಪುಣ್ಯಸ್ಮರಣೆ



**ಶ್ರೀಯುತ ಎ. ಗಂಗಾಧರಪ್ಪ**

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ಮುನ್ನಡೆಯುತ್ತಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ...

ಮಕ್ಕಳು, ಅಪಾರ ಬಂಧು-ಬಳಗ ಹಾಗೂ ಅಣಪೂರ್ ವಂಶಸ್ಥರು

- ಈಶ್ವರ್ ರೇಡಿಯೋ ಅಂಡ್ ಟಿ.ವಿ., ಅಶೋಕ ರೋಡ್, ದಾವಣಗೆರೆ.
- ಈಶ್ವರ್ ಡಿಜಿಟ್ರಾನಿಕ್ಸ್, ಹಾವೇರಿ.
- ಈಶ್ವರ್ ಡಿಜಿಟ್ರಾನಿಕ್ಸ್, ಹುಬ್ಬಳ್ಳಿ.
- ಈಶ್ವರ್ ಡಿಜಿಟ್ರಾನಿಕ್ಸ್, ಚನ್ನಗಿರಿ.
- ಈಶ್ವರ್ ಡಿಜಿಟ್ರಾನಿಕ್ಸ್, ರಾಣೇಬೆನ್ನೂರು.
- ರಾಜ್ ಏಜೆನ್ಸೀಸ್, ದಾವಣಗೆರೆ.
- ರಾಜ್ ಏಜೆನ್ಸೀಸ್, ಬೆಳಗಾವಿ. ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು.

# ಒಳಮೀಸಲಾತಿಗೆ ಆಗ್ರಹಿಸಿ ಮಾರ್ಚ್ 25 ರಂದು ಪಾದಯಾತ್ರೆ



ಹರಿಹರ, ಫೆ.18- ಅಸ್ಪೃಶ್ಯ ಸಮಾಜದ ಸಂವಿಧಾನಿಕ ಹಕ್ಕುಗಳನ್ನು ಹಾಗೂ ನ್ಯಾಯ ಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯಂತೆ ಒಳಮೀಸಲಾತಿ ಕಲ್ಪಿಸುವಂತೆ ಆಗ್ರಹಿಸಿ ಮಾಡುವ ಪಾದಯಾತ್ರೆ ಇದಾಗಿದ್ದು, ಇದು ಯಾವುದೇ ಒಬ್ಬ ವ್ಯಕ್ತಿಯ ನೇತೃತ್ವದಲ್ಲಿ ನಡೆ ಯುವ ಪಾದಯಾತ್ರೆಯಲ್ಲ ಎಂದು ಹಿರಿಯೂರು ಕೋಡಿಹಳ್ಳಿ ಆದಿಜಾಂಬವ ಪೀಠದ ಶ್ರೀ ಷಡಕ್ಷರ ಮುನಿ ದೇಶಿಕೇಂದ್ರ ಸ್ವಾಮೀಜಿಗಳು ಹೇಳಿದರು.

ಹನಗವಾಡಿ ಸಮೀಪದ ಪ್ರೊಫೆಸರ್ ಬಿ. ಕೃಷ್ಣಪ್ಪ ಸಾಂಸ್ಕೃತಿಕ ಭವನ, ಮೈತ್ರಿ ವನದಲ್ಲಿ ಅಸ್ಪೃಶ್ಯ ಸಮುದಾಯಗಳ ಮಠಾಧೀಶರ ಒಕ್ಕೂಟ ಕರ್ನಾಟಕದ ವತಿಯಿಂದ ನಡೆದ ಪಾದಯಾತ್ರೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಶ್ರೀಗಳು ಮಾತನಾಡಿದರು.

ನ್ಯಾ. ಎ.ಜೆ. ಸದಾಶಿವ ಆಯೋಗದ ವರದಿ ಅಂಗೀಕರಿಸಿ ಒಳಮೀಸಲಾತಿ ಜಾರಿಗೊಳಿಸಲು ಸರ್ಕಾರಕ್ಕೆ ಆಗ್ರಹಿಸಿ ಹೋರಾಟಗಾರರು ಹಾಗು ಸಮುದಾಯದ ಶ್ರೀಗಳಿಂದ ಮಾರ್ಚ್ 25 ರಂದು ಹರಿಹರದಿಂದ ಆರಂಭಿಸಿ ಏಪ್ರಿಲ್ 21 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಪಾದಯಾತ್ರೆ ಸಮಾರೋಪಗೊಳ್ಳಲಿದೆ ಎಂದರು.

ಒಳಮೀಸಲಾತಿಗಾಗಿ ಅಸ್ಪೃಶ್ಯ ಸಮುದಾಯ ಗಳ ಮಠಾಧೀಶರುಗಳ ಒಕ್ಕೂಟದ ನೇತೃತ್ವದಲ್ಲಿ ನಡೆಯುವ ಪಾದಯಾತ್ರೆಗೆ ಸಂಪೂರ್ಣ ಬೆಂಬಲಿಸುವ ಘೋಷಣೆ ವ್ಯಕ್ತವಾಯಿತು.

ಸಭೆಯ ಸಾನ್ನಿಧ್ಯ ವಹಿಸಿದ್ದ ಐಮಂಗಲ ಶ್ರೀ ಮಹಾ ಶಿವಶರಣ ಹರಳಯ್ಯ ಗುರುಪೀಠದ ಶ್ರೀ ಬಸವ ಹರಳಯ್ಯ ಸ್ವಾಮೀಜಿ ಮಾತನಾಡಿ, ಕಳೆದ ಎರಡು ದಶಕಗಳ ಕಾಲ ಬರೀ ಹೋರಾಟ ಮಾಡಿದ್ದೆ ಆಗಿದೆ. ಕಡಿಮೆ ಜನಸಂಖ್ಯೆ ಇರುವ ಕೆಲವು ಜನರ ಬೇಡಿಕೆಗಳು ಈಡೇರುತ್ತವೆ. ಆದರೆ ನಮ್ಮ ಬೇಡಿಕೆ ಮಾತ್ರ ಇನ್ನೂ ಈಡೇರಿಲ್ಲ ಏಕೆ? ಎಂದು ಪ್ರಶ್ನಿಸಿದರು.

ಸಭೆಯ ಸಾನ್ನಿಧ್ಯ ವಹಿಸಿದ್ದ ಕಲಘಟಗಿ ಬೀರವಳ್ಳಿ ಶ್ರೀ ಗುರುದೇವ ತಪೋವನದ ಗುರುಮಾತೆ ನಂದಾ ತಾಯಿ ಮಾತನಾಡಿ, ಈ ಪಾದಯಾತ್ರೆ ಕೊನೆಯ ಹೋರಾಟವಾಗಬೇಕು. ಇದು ಶಾಂತಿಯಿಂದ ಅಥವಾ ಕ್ರಾಂತಿಯಿಂದ ಆಗಬಹುದು, ಆದರೆ ಹೋರಾಟ ಮಾತ್ರ ಪ್ರಬಲವಾಗಿರಬೇಕು ಎಂದು ಹೇಳಿದರು.

ಸಮಾಜದ ಮುಖಂಡರುಗಳಾದ ಟಿ.ಡಿ. ರಾಜಗಿರಿ, ಮುತ್ತಣ್ಣ ಬೆಣ್ಣೂರ್, ಸಂತೋಷ್ ಸವಣೂರು, ನಗರಸಭೆ ಸದಸ್ಯ ಎನ್.ರಜಿನಿಕಾಂತ್, ಚನ್ನಗಿರಿಯ ಎಂ.ಕೆ ನಾಗಪ್ಪ, ಎಚ್ ಮಲ್ಲೇಶ್, ನಂದಕುಮಾರ್ ಬಾಂಬೆಕರ್, ಆನಂದ ಚದರಗೊಳ್ಳ, ಹುಲ್ಲೂರು ಕುಮಾರ್, ನಗರಸಭಾ ಮಾಜಿ ಅಧ್ಯಕ್ಷ ಕೆ. ಮರಿದೇವ, ಗ್ರಾ.ಪಂ. ಸದಸ್ಯ ಸಿದ್ಧಾರೂಢ, ಮಾಜಿ ಸದಸ್ಯ ನಿಜಗುಣ, ಎಪಿಎಂಸಿ ಮಾಜಿ ಸದಸ್ಯ ಎ.ಕೆ.ಶಿವರಾಮ್, ಹಳ್ಳಿಯಾಳ್ ಚಂದ್ರಶೇಖರ್, ಡಿ. ಹನುಮಂತಪ್ಪ, ಮಿಟ್ಲಕಟ್ಟೆ ಆರ್.ಮಂಜಪ್ಪ, ಪಿ.ಜೆ. ಮಹಾಂತೇಶ್, ಪತ್ರಕರ್ತರಾದ ಆರ್. ಮಂಜುನಾಥ್, ಡಾ.ಕೆ. ಜೈಮುನಿ, ವಿಶ್ವನಾಥ್ ಮೈಲಾಳ, ಜಿ.ಎಂ. ಮಂಜುನಾಥ್ ಹಾಗು ಇನ್ನಿತರರು ಮಾತನಾಡಿದರು.

ಚನ್ನಗಿರಿ ಆರ್. ಪ್ರಭಾಕರ್ ಧಾರವಾಡದ ಶಶಿಕಲಾ ಎಂ.ಟಿ. ಪ್ಯಾಟಿ, ತಾ.ಪಂ. ಅಧ್ಯಕ್ಷೆ ಶ್ರೀದೇವಿ ಮಂಜಪ್ಪ, ರಾಜನಹಳ್ಳಿ ಗ್ರಾ.ಪಂ. ಸದಸ್ಯ ಎ.ಕೆ. ನಾಗೇಂದ್ರಪ್ಪ, ಮಂಜುನಾಥ್, ಜಿ. ಶಂಕರಮೂರ್ತಿ, ಶ್ರೀನಿವಾಸ್, ಎಂ.ಎಸ್. ಆನಂದ್ ಕುಮಾರ್, ಮಾಕನೂರು ಹನುಮಂತಪ್ಪ, ಕೊತ್ವಾಲ ಹನುಮಂತಪ್ಪ, ಮಂಜುನಾಥ್ ಕೊಪ್ಪಳ, ಎಸ್. ಕೇಶವ ಮತ್ತಿತರರು ಹಾಜರಿದ್ದರು.

# ಅಂತರ್ಜಾಲದ ಮೂಲಕ ತರಳಬಾಳು ಹುಣ್ಣಿಮೆ ವೀಕ್ಷಣೆ

ಸಿರಿಗೆರೆ, ಫೆ.18 - ಭಾವೈಕ್ಯತಾ ಹಾಗೂ ಜ್ಞಾನ ದಾಸೋಹ ಕಾರ್ಯಕ್ರಮ ಎಂದು ಹೆಸ ರಾಗಿರುವ 'ತರಳಬಾಳು ಹುಣ್ಣಿಮೆ' ಮಹೋ ತ್ಸವ ಈ ವರ್ಷ ಬಳ್ಳಾರಿ ಜಿಲ್ಲೆಯ ಕೊಟ್ಟೂರು ಪಟ್ಟಣದಲ್ಲಿ ಫೆಬ್ರವರಿ 19 ರಿಂದ 27ರವರೆಗೆ ನಡೆಯಬೇಕಿತ್ತು. ತರಳ ಬಾಳು ಹುಣ್ಣಿಮೆ ಮಹೋತ್ಸ ವವನ್ನು ಕೊರೊನಾ ಹಿನ್ನೆಲೆಯಲ್ಲಿ ಅಂತರ್ಜಾಲದ ಮುಖೇನ ಆಚರಿಸಲು ತರಳಬಾಳು ಬೃಹ ನ್ಮಠದ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತೀರ್ಮಾನ ಕೈಗೊಂಡಿದ್ದಾರೆ.

ತರಳಬಾಳು ಜಗದ್ಗುರು ಬೃಹನ್ಮಠವು ಕಳೆದ 70 ವರ್ಷಗಳಿಂದ ನಾಡಿನ ಒಳ ಹೊರಗೆ ಆಚರಿಸಿಕೊಂಡು ಬಂದಿರುವ ತರ ಳಬಾಳು ಹುಣ್ಣಿಮೆ ಮಹೋತ್ಸವ ಒಂದು ನಾಡಹಬ್ಬವಾಗಿ ಜನಮನ್ನಣೆ ಪಡೆದಿದೆ. ಜಾತಿ, ಮತ ಪ್ರಾಂತ್ಯ ಪ್ರದೇಶಗಳ ಭೇದವಿ ಲ್ಲದೆ ಭಾವೈಕ್ಯ ಸಂಗಮವಾಗಿ ಮಹೋತ್ಸವ ಮಹಾವೇದಿಕೆಯಾಗಿ ಪರಿಣಮಿಸಿದೆ.

ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಪ್ರತಿ ವರ್ಷವೂ ನಾಡಿನ ಒಳ ಹೊರಗೆ ಯಶಸ್ವಿಯಾಗಿ ನಡೆದುಕೊಂಡು ಬಂದು ನಾಡಿನ ಪ್ರಮುಖ ಧಾರ್ಮಿಕ ಸಮಾರಂ ಭಗಳಿಗೆ ಮಾತೃ ಸ್ವರೂಪದಂತಿರುವ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ದಿವ್ಯ ಮಾರ್ಗದ ರ್ಶನದಲ್ಲಿ ಜ್ಞಾನ ದಾಸೋಹದ ಸಮಾರಂಭವಾಗಿ ಹೊಸ ಆಯಾಮವನ್ನು ಪಡೆದಿದೆ.

2021ರ ಫೆಬ್ರವರಿ ತಿಂಗಳಿನಲ್ಲಿ ಬಳ್ಳಾರಿ ಜಿಲ್ಲೆಯ ಕೊಟ್ಟೂರು ಪಟ್ಟಣದಲ್ಲಿ ನಡೆಸಲು ನಿರ್ಧರಿಸಲಾಗಿದ್ದ ತರಳಬಾಳು ಹುಣ್ಣಿಮೆಯನ್ನು ಕೊರೊನಾ ಕಾರಣದಿಂದ ಮುಂದೂಡಿದ್ದು, ಸರ್ಕಾರದ ಆದೇಶಕ್ಕನು ಗುಣವಾಗಿ ಹಾಗೂ ಶ್ರೀಮಠದ ಸಂಪ್ರದಾ ಯದಂತೆ ಸರಳವಾಗಿ, ವಿಭಿನ್ನವಾಗಿ ಸಾಮಾ ಜಿಕ ಜಾಲತಾಣದ ಮುಖಾಂತರ ತರಳ ಬಾಳು ಹುಣ್ಣಿಮೆ ಮಹೋತ್ಸವ ಆಚರಿಸಲು ಜಗದ್ಗುರುಗಳು ಸಂಕಲ್ಪಿಸಿದ್ದಾರೆ.

ಜಾಲತಾಣದಲ್ಲಿ ಸಭಾ ಕಾರ್ಯಕ್ರಮಕ್ಕೆ ಮಾತ್ರ ಸೀಮಿತಗೊಳಿಸಿ ತರಳಬಾಳು ಹುಣ್ಣಿಮೆ ಮಹೋತ್ಸವ ಕಾರ್ಯಕ್ರಮದ ನೇರ ದೃಶ್ಯಾವಳಿಯು ತರಳಬಾಳು ಯ್ಯೂಟೂಬ್ ಚಾನಲ್‌ಗೆ ಸಬ್‌ಸ್ಕ್ರೈಬ್ ಆಗುವ ಮೂಲಕ ಭಕ್ತರು, ಶಿಷ್ಯವೃಂದ, ವಿದ್ಯಾರ್ಥಿ- ವಿದ್ಯಾರ್ಥಿನೀ ಯರು ಹುಣ್ಣಿಮೆಯ ಕಾರ್ಯಕ್ರಮ ವೀಕ್ಷಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

**ಪ್ರತಿದಿನದ ವಿಶೇಷ :** ನಾಳೆ ದಿನಾಂಕ 19 ರಿಂದ 27ರವರೆಗೆ ಬೆಳಗ್ಗೆ 6 ರಿಂದ 6.30ರವರೆಗೆ ಶಿವಮಂತ್ರ ಲೇಖನ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಂದ.

ಸಭಾಕಾರ್ಯಕ್ರಮ ಸಂಜೆ ನೇರ ಪ್ರಸಾರ ಜಾಲತಾಣದಲ್ಲಿ ಲಿಂಕ್ : https: //www.youtube.com/channel/ UCuUAJc9y dIUh7RfObIl_4mg

# ಸೀಟು ಮಾರಾಟ ದಂಧೆ

**(1ನೇ ಪುಟದಿಂದ)** ಪಡೆದಿರುತ್ತಿದ್ದರು. ಹೀಗಾಗಿ ಕರ್ನಾಟಕ ಕೌನ್ಸೆಲಿಂಗ್‌ನಲ್ಲಿ ನೆಪ ಮಾತ್ರಕ್ಕೆ ಭಾಗಿಯಾಗುತ್ತಿದ್ದರು. ಆ ಮೂಲಕ ಅವರು ವೈದ್ಯಕೀಯ ಕಾಲೇಜಿನ ಆಡಳಿತ ಮಂಡಳಿಗೆ ಖಾಲಿ ಸೀಟು ದೊರೆಯುವಂತೆ ಮಾಡುತ್ತಿದ್ದರು. ಮಧ್ಯವರ್ತಿಗಳು ಈ ವಂಚನೆಯಲ್ಲಿ ಕೈ ಜೋಡಿಸುತ್ತಿದ್ದರು ಎಂದು ಸಿ.ಬಿ.ಡಿ.ಟಿ. ತಿಳಿಸಿದೆ.

ನಂತರದಲ್ಲಿ ವಿದ್ಯಾರ್ಥಿಗಳು ಪ್ರವೇಶ ಪ್ರಕ್ರಿಯೆಯಿಂದ ಹಿಂದೆ ಸರಿಯುತ್ತಿದ್ದರು. ಒಂದು ಖಾಲಿ ಸೀಟು ಕಾಲೇಜಿನ ಆಡಳಿತ ಮಂಡಳಿಗೆ ಸಿಗುತ್ತಿತ್ತು. ಇದನ್ನು ಖಾಲಿ ಆಗದ ಸೀಟು ಭರ್ತಿ ಮಾಡುವ ಮಾಪ್ - ಅಪ್ ರೌಂಡ್‌ಗೆ ಬಳಸಲಾಗುತ್ತಿತ್ತು ಎಂದು ಸಿ.ಬಿ.ಡಿ.ಟಿ. ವಂಚನೆಯ ಜಾಲ ವಿವರಿಸಿದೆ. ನೀಟ್ ಪರೀಕ್ಷೆಯಲ್ಲಿ ಕಡಿಮೆ ರ್‍ಯಾಂಕ್ ಪಡೆಯುತ್ತಿದ್ದ ವಿದ್ಯಾರ್ಥಿಗಳಿಗೆ ಈ ಸೀಟನ್ನು ಭಾರೀ ಕ್ಯಾಪಿಟೇಷನ್ ಶುಲ್ಕಕ್ಕೆ ಮಾರಿಕೊಳ್ಳಲಾಗುತ್ತಿತ್ತು. ಕ್ಯಾಪಿಟೇಷನ್ ಕಾನೂನು ಉಲ್ಲಂಘಿಸಿ ಅಕ್ರಮವಾಗಿ ಹಣ ನೀಡಲಾಗುತ್ತಿತ್ತು. ಬ್ರೋಕರ್‌ಗಳ ಮೂಲಕ ಈ ಹಣ ಕಾಲೇಜಿನ ಟ್ರಸ್ಟಿಗಳು ಹಾಗೂ ಪ್ರಮುಖ ವ್ಯಕ್ತಿಗಳಿಗೆ ತಲುಪುತ್ತಿತ್ತು.

ಆದಾಯ ತೆರಿಗೆ ಇಲಾಖೆ ನಡೆಸಿದ ಶೋಧ ಕಾರ್ಯದಲ್ಲಿ ಎಂ.ಬಿ.ಬಿ.ಎಸ್., ದಂತ ವೈದ್ಯಕೀಯ ಹಾಗೂ ಸ್ನಾತಕೋತ್ತರ ವೈದ್ಯಕೀಯ ಸ್ಥಾನಗಳನ್ನು ಹಣಕ್ಕಾಗಿ ಮಾರಿಕೊಳ್ಳುತ್ತಿದ್ದುದು ಬಯಲಾಗಿದೆ. ನೋಟ್ ಪುಸ್ತಕಗಳು, ಕೈ ಬರಹದ ಡೈರಿಗಳು, ಎಕ್ಸೆಲ್ ಶೀಟ್‌ಗಳಲ್ಲಿ ವಿದ್ಯಾರ್ಥಿಗಳು ಹಾಗೂ ಬ್ರೋಕರ್‌ಗಳ ಮೂಲಕ ಹಣ ಪಡೆದಿರುವುದು ಬೆಳಕಿಗೆ ಬಂದಿದೆ ಎಂದು ಸಿ.ಬಿ.ಡಿ.ಟಿ. ತಿಳಿಸಿದೆ.

ಇಷ್ಟೇ ಅಲ್ಲದೇ ಮ್ಯಾನೇಜ್‌ಮೆಂಟ್ ಕೋಟಾದ ವಿದ್ಯಾರ್ಥಿಗಳು ಲಿಖಿತ ಪರೀಕ್ಷೆ ಹಾಗೂ ವೈವಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು 1 ಲಕ್ಷ ರೂ.ಗಳಿಂದ ಎರಡು ಲಕ್ಷ ರೂ.ಗಳ ಪ್ಯಾಕೇಜ್ ನಿಗದಿ ಪಡಿಸಿದ್ದೂ ಕಂಡು ಬಂದಿದೆ. ಅಕ್ರಮವಾಗಿ ಗಳಿಸಿದ್ದ ಈ ಹಣವನ್ನು ಕಾನೂನು ಬಾಹಿರವಾಗಿ ಬೇರೆ ಸಂಸ್ಥೆಗಳು ಹಾಗೂ ಸ್ಥಿರಾಸ್ತಿಗಳ ಮೇಲೆ ಹೂಡಿಕೆ ಮಾಡಿರುವುದು ಕಂಡು ಬಂದಿದೆ. ಒಂದು ಕಾಲೇಜಿನ ಹಣವನ್ನು ಪ್ಲೈವುಡ್ ಉದ್ಯಮದಲ್ಲಿ ತೊಡಗಿಸಲಾಗಿದೆ ಎಂದೂ ಸಿ.ಬಿ.ಡಿ.ಟಿ. ತಿಳಿಸಿದೆ.

## ಚನ್ನಗಿರಿ ತಾ.ಗೆ ಇಂದು ಸಂಸದರು

ಚನ್ನಗಿರಿ ತಾಲ್ಲೂಕಿನ ಹೊನ್ನೇಮರದಹಳ್ಳಿ ಗ್ರಾಮದಲ್ಲಿ ಇಂದು ಬೆಳಗ್ಗೆ 11.30 ಗಂಟೆಗೆ ನಡೆಯಲಿರುವ ಶ್ರೀ ಮರುಳಸಿದ್ದೇಶ್ವರ ಸ್ವಾಮಿ ದೇವಸ್ಥಾನ ಪ್ರವೇಶೋತ್ಸವ ಕಾರ್ಯಕ್ರಮದಲ್ಲಿ ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ ಅವರು ಪಾಲ್ಗೊಳ್ಳುವರು. ಮಧ್ಯಾಹ್ನ 1.30 ಗಂಟೆಗೆ ದಾವಣಗೆರೆಯ ರೈಲ್ವೆ ನಿಲ್ದಾಣ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ವೀಕ್ಷಣೆ ಮಾಡಲಿದ್ದಾರೆ.

## ನಗರದಲ್ಲಿ ನಾಳೆ ಸರ್ವಜ್ಞ ಜಯಂತಿ

ದಾವಣಗೆರೆ, ಫೆ. 18 - ನಾಡಿದ್ದು ದಿನಾಂಕ 20 ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಂತ ಕವಿ ಸರ್ವಜ್ಞ ಜಯಂತಿಯನ್ನು ರಾಜ್ಯಾದ್ಯಂತ ಕೋವಿಡ್-19ರ ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಸರಳವಾಗಿ ಆಚರಿಸಲಾಗುತ್ತಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

# ರೈತ ಹಾಗೂ ಕಾರ್ಮಿಕ ಸಂಘಟನೆಗಳಿಂದ ರಸ್ತೆ ತಡೆ




## ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಲು ಆಗ್ರಹ

ದಾವಣಗೆರೆ, ಫೆ.18- ದೆಹಲಿಯಲ್ಲಿನ ಹೋರಾಟ ನಿರತ ರೈತರ ಕರೆಯ ಮೇರೆಗೆ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸ ಬೇಕು ಹಾಗೂ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡುವಂತೆ ಆಗ್ರಹಿಸಿ ನಗರ ದಲ್ಲಿಂದು ರೈತ ಹಾಗೂ ಕಾರ್ಮಿಕ ಸಂಘ ಟನೆಗಳು ರಸ್ತೆ ತಡೆ ನಡೆಸಿ ಪ್ರತಿಭಟಿಸಿದವು.

ರೈಲ್ವೇ ನಿಲ್ದಾಣದ ಮುಂಭಾಗದಲ್ಲಿ ಜಮಾಯಿಸಿದ್ದ ಎಐಕೆಎಸ್‌ಸಿಸಿ, ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು, ರೈತರು ರೈಲು ತಡೆ ನಡೆಸಲು ಮುಂದಾದಾಗ, ಪೊಲೀಸರು ಬ್ಯಾರಿಕೇಡ್ ಹಾಕುವ ಮೂಲಕ ತಡೆದರು. ಇದರಿಂದಾಗಿ ರೈಲ್ವೆ ತಡೆ ನಡೆಸಲು ತೆರಳಿದ್ದ ಪ್ರತಿಭಟನಾಕಾರರು ಅನಿವಾರ್ಯವಾಗಿ ರೈಲ್ವೆ ನಿಲ್ದಾಣದ ಮುಂಭಾಗದಲ್ಲೇ ರಸ್ತೆ ತಡೆ ನಡೆಸಿ ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೃಷಿ ಕಾಯ್ದೆ ಹಿಂಪಡೆಯುವರೆಗೂ ಹೋರಾಟ ಮುಂದುವರೆಸಲಾಗುವುದು. ಕಳೆದ 90 ದಿನಗಳಿಂದ ದೆಹಲಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದರೂ ಸಹ ಕೇಂದ್ರ ಸರ್ಕಾರ ಮೊಂಡುತನ ಪ್ರದರ್ಶಿಸುತ್ತಿದ್ದೆ. ಬದಲಿಗೆ ರೈತ ಪರ ಹೋರಾಟ ಮಾಡುವವರನ್ನು ದೇಶದ್ರೋಹಿಗಳೆಂದು ಕೇಸು ದಾಖಲು ಮಾಡಿಕೊಳ್ಳುತ್ತಿದೆ. ಇದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.


ಕೇಂದ್ರ ಸರ್ಕಾರ ಸದರಿ ಸಾಲಿನಲ್ಲಿ ಮೆಕ್ಕೆಜೋಳಕ್ಕೆ 1760 ರೂ ಕನಿಷ್ಟ ಬೆಂಬಲ ಬೆಲೆ ನಿಗದಿಪಡಿಸಿದೆ. ಆದರೆ ಖರೀದಿದಾರರು 1300 ರೂ.ಗೆ ಖರೀದಿ ಮಾಡುತ್ತಿದ್ದಾರೆ. ಇದರಿಂದ ಪ್ರತಿ ಕ್ವಿಂಟಾಲ್‌ಗೆ ಕನಿಷ್ಟ ಬೆಂಬಲ ಬೆಲೆಗೆ ಯಾವುದೇ ಕಾಯಿದೆ ಇಲ್ಲದಿರುವುದೇ ರೈತರ ಶೋಷಣೆಗೆ ಪ್ರಮುಖ ಕಾರಣ. ಈ ಹಿನ್ನೆಲೆಯಲ್ಲಿ ಎಂಎಸ್‌ಪಿಗೆ ಕಾಯಿದೆ ರೂಪಿಸಿ, ಕನಿಷ್ಟ ಬೆಂಬಲ ಬೆಲೆಗಿಂತ ಕಡಿಮೆ ದರಕ್ಕೆ ರೈತರ ಉತ್ಪನ್ನ ಖರೀದಿಸುವವರಿಗೆ 6 ತಿಂಗಳು ಜೈಲು ಶಿಕ್ಷೆ ಮತ್ತು ವ್ಯತ್ಯಾಸದ ಹಣವನ್ನು ಮರಳಿ ರೈತರಿಗೆ ಕೊಡಿಸುವ ಅಂಶಗಳನ್ನು ಕಾಯಿದೆ ಹೊಂದಿರಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಾರ್ಮಿಕ ಮುಖಂಡರಾದ ಹೆಚ್.ಕೆ.ರಾಮಚಂದ್ರಪ್ಪ, ಹೆಚ್.ಜಿ. ಉಮೇಶ್, ರೈತ ಸಂಘಟನೆಯ ಮುಖಂಡರಾದ ಹುಚ್ಚವ್ವನಹಳ್ಳಿ ಮಂಜು ನಾಥ್, ಹೊನ್ನೂರು ಮುನಿಯಪ್ಪ, ತೇಜ ಸ್ವಿನಿ ಪಟೇಲ್, ಪೂಜಾರ್ ಅಂಜಿನಪ್ಪ, ಜಯಪ್ಪ, ಹಾಲೇಶ್, ಶಿವರಾಜ್, ಭೀಮಾರೆಡ್ಡಿ, ಆವರಗೆರೆ ಚಂದ್ರು, ಐರಣಿ ಚಂದ್ರು, ರಂಗನಾಥ್, ಹಾಳೂರು ಸಿದ್ದೇಶ್, ಕೈದಾಳೆ ಮಂಜುನಾಥ್, ತಿಪ್ಪೇಸ್ವಾಮಿ, ಸತೀಶ್ ಅರವಿಂದ್, ಸುನೀತ್‌ಕುಮಾರ್, ಚಂದ್ರಪ್ಪ, ಭಾರತಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಆರ್‌ಟಿಇ ಶಾಲೆಗಳ ಪಟ್ಟಿ ಪ್ರಕಟ : ಸಾರ್ವಜನಿಕರಿಂದ ಆಕ್ಷೇಪಣೆಗಳ ಆಹ್ವಾನ

ದಾವಣಗೆರೆ, ಫೆ. 18 -2021-22ನೇ ಸಾಲಿನ ಶೈಕ್ಷಣಿಕ ವರ್ಷದ ಆರ್.ಟಿ.ಇ ಪ್ರವೇಶಕ್ಕೆ ಸಂಬಂಧಿಸಿದ ನೆರೆಹೊರೆಯ ಶಾಲೆಗಳ ಪಟ್ಟಿಯನ್ನು ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು, ಪಟ್ಟಿಗೆ ಸಂಬಂಧಿಸಿದಂತೆ ವಾರ್ಡ್‌ಗಳ ಸಾರ್ವಜನಿಕರು ಆಕ್ಷೇಪಣೆಗಳನ್ನು ಫೆ.20 ರೊಳಗೆ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ದಾವಣಗೆರೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ದಾವಣಗೆರೆ ದಕ್ಷಿಣ ವಲಯ ಇವರಿಗೆ ಸಲ್ಲಿಸಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿ ತಿಳಿಸಿದ್ದಾರೆ.

## ಶ್ರೀಮತಿ ರತ್ನಮ್ಮನವರು ನಿಧನ



ಚನ್ನಗಿರಿ ತಾಲ್ಲೂಕು ಮೆದಿಕೆರೆ ಗ್ರಾಮದ ವಾಸಿ, ದಿ. ಪಟೇಲ್ ಮಹೇಶ್ವರಪ್ಪನವರ ಧರ್ಮಪತ್ನಿ

**ಶ್ರೀಮತಿ ರತ್ನಮ್ಮನವರು**

ಅವರು, ದಿನಾಂಕ 18.6.2021 ರಂದು ಗುರುವಾರ ರಾತ್ರಿ 10.45 ಕ್ಕೆ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.02.2021ರಂದು ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಮೆದಿಕೆರೆಯಲ್ಲಿರುವ ಮೃತರ ತೋಟದಲ್ಲಿ ನೆರವೇರಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :

**ಮೊ. : 98803 45790, 91640 53244**

## ಚಿರಸ್ಮರಣೆ



ಕಾತರಕಿ ವೀರಭದ್ರಪ್ಪನವರು — ನಿಧನ : 19.2.2014

ಕಾತರಕಿ ವೀರಮ್ಮನವರು — ನಿಧನ : 28.8.2005

ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲ ಮುನ್ನಡೆಯುತ್ತಿರುವ ಹಾಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ,


**ಶ್ರೀಮತಿ ರೂಪಾ ಮತ್ತು ಶ್ರೀ ಕಾತರಕಿ ರುದ್ರೇಶ್**

**ಶ್ರೀಮತಿ ಕವಿತಾ ಮತ್ತು ಶ್ರೀ ಪ್ರಭಾಕರ್**

ಮೊಮ್ಮಕ್ಕಳಾದ : ಚಿ॥ ಕಾತರಕಿ ಗೌತಮ್‌ರಾಜ್, ಕು॥ ಪ್ರಾರ್ಥನಾ, ಚಿ॥ ಕಾತರಕಿ ವಿಜೀತ್

ಬಂಧುಗಳು, ವಿನೋಬನಗರ, ದಾವಣಗೆರೆ. ಮೊ : 9482586657

## ಕೆ.ಹೆಚ್. ಬಸವರಾಜಪ್ಪ ನಿಧನ



ದಾವಣಗೆರೆ ದೊಡ್ಡಪೇಟೆ ಜುಮ್ಮಾ ಮಸೀದಿ ಗಲ್ಲಿ ವಾಸಿ **ಶ್ರೀ ಕೆ.ಹೆಚ್. ಬಸವರಾಜಪ್ಪ** ಅವರು ದಿನಾಂಕ 18.02.2021ರ ಗುರುವಾರ ರಾತ್ರಿ 9 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 79 ವರ್ಷ ವಯಸ್ಸಾಗಿತ್ತು. ಸಹೋದರ, ಸಹೋದರಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 19.02.2021ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ನಗರದ ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ


## ಮೈಲಾರ ಜಾತ್ರೆ ಇಂದಿನಿಂದ ಮಾರ್ಚ್ 2 ರವರೆಗೆ ನಿಷೇದಾಜ್ಞೆ

ಹೂವಿನಹಡಗಲಿ, ಫೆ.18- ತಾಲ್ಲೂಕಿನ ಮೈಲಾರಲಿಂಗೇಶ್ವರ ಜಾತ್ರೆ ಅಂಗವಾಗಿ ಮೈಲಾರ ತಲುಪುವ ಎಲ್ಲಾ ದಾರಿಗಳನ್ನು ಪೊಲೀಸರು ನಾಕಾಬಂದಿ ಮೂಲಕ ಬಂದ್ ಮಾಡಿದ್ದಾರೆ. ಹಾಗಾಗಿ ಪರಸ್ಥಳದಿಂದ ಬರುವ ಭಕ್ತರು ಮಾತ್ರವಲ್ಲದೇ ಎಲ್ಲಾ ಬಗೆಯ ವಾಹನಗಳು ಸೇರಿದಂತೆ ಎತ್ತಿನ ಬಂಡಿಗಳಲ್ಲಿ ಜಾತ್ರೆಗೆ ಬರುವ ಭಕ್ತರಿಗೆ ಅವಕಾಶ ಇಲ್ಲವಾಗಿದೆ ಎಂದು ಹಿಂದೂ ಧಾರ್ಮಿಕ ದತ್ತಿ ಇಲಾಖೆ ಮತ್ತು ಗ್ರಾಮ ಪಂಚಾಯಿತಿ ಪ್ರಕಟಣೆ ತಿಳಿಸಿದೆ.

ಭಕ್ತರು ಏನಾದರೂ ಬಂದರೆ ಅವರಿಗೆ ಯಾವುದೇ ಮೂಲಭೂತ ಸೌಕರ್ಯಗಳು ಲಭ್ಯವಾಗುವುದಿಲ್ಲ. ಏಕೆಂದರೆ ಕೋವಿಡ್-19ರ ಮಾರ್ಗ ಸೂಚಿ ಅನ್ವಯ ಜನಾರೋಗ್ಯದ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಕುಡಿಯುವ ನೀರು, ಬೆಳಕು, ಶೌಚಾಲಯ, ಸಾರಿಗೆ ಬಸ್ಸುಗಳ ವ್ಯವಸ್ಥೆ ಇರುವುದಿಲ್ಲ. ನಾಳೆ ದಿನಾಂಕ 19 ರಿಂದ ಮಾರ್ಚ್ 2 ರವರೆಗೆ ನಿಷೇದಾಜ್ಞೆ ಜಾರಿಯಾಗಿದ್ದು, ಧಾರ್ಮಿಕ ವಿಧಿ, ವಿಧಾನಗಳಿಗೆ ಅಡಚಣೆ ಇರುವುದಿಲ್ಲ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

## ಏಳನೇ ವರ್ಷದ ಪುಣ್ಯಸ್ಮರಣೆ



**ಲಿಂ॥ ಸಿ.ಎಸ್. ಸಿದ್ಧಬಸಯ್ಯನವರು, ಮುಡೇನಹಳ್ಳಿ**

ಲಿಂಗೈಕ್ಯ : 19.02.2014

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು

ನಿಮ್ಮ ನೆನಪು ನಮ್ಮಲ್ಲಿ ಸದಾ ಹಚ್ಚಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ,

ಧರ್ಮಪತ್ನಿ : **ಶ್ರೀಮತಿ ಶಾರದಮ್ಮ ಸಿ.ಎಸ್. ಸಿದ್ಧಬಸಯ್ಯ**

**ಶ್ರೀಮತಿ, ಶ್ರೀ ಸಿ.ಎಸ್. ಮರುಳಸಿದ್ಧಯ್ಯ ಮತ್ತು ಸಹೋದರರು,** ಅಗಸನಕಟ್ಟೆ

**ಶ್ರೀಮತಿ ಲತಾ, ಶ್ರೀ ಸಿ.ಎಸ್. ನಾಗರಾಜಯ್ಯ,**

**ಶ್ರೀಮತಿ ಗೀತಾ, ಶ್ರೀ ಸಿ.ಎಸ್. ವಸಂತಯ್ಯ**

**ಶ್ರೀಮತಿ ಮಮತ, ಶ್ರೀ ಸಿ.ಎಸ್. ಸಿದ್ದೇಶ್**


ಮೊಮ್ಮಕ್ಕಳಾದ : **ಯಶವಂತ್, ಯೋಗೇಶ್, ಆಕಾಶ್, ನಿವೇದಿತಾ, ನೂತನ್, ಕಾರ್ತಿಕ್ ಹಾಗೂ ಬಂಧು-ಮಿತ್ರರು,** ಮುಡೇನಹಳ್ಳಿ.

**ಮುಡೇನಹಳ್ಳಿ ಮತ್ತು ಅಗಸನಕಟ್ಟೆ ಗ್ರಾಮಸ್ಥರು**

**ಶ್ರೀ ವಿಶ್ವಬಂಧು ಪ್ರಾವಿಜನ್ ಸ್ಟೋರ್**

ಕೆ.ಆರ್.ಮಾರ್ಕೆಟ್, ದಾವಣಗೆರೆ. ಮೊ : 99807-28126

## ಅಶ್ರುತರ್ಪಣ



ದಿನಾಂಕ 18.02.2021ರಂದು ನಿಧನರಾದ ನಮ್ಮ ಆಸ್ಪತ್ರೆಯಲ್ಲಿ 40 ವರ್ಷಗಳಿಂದ ಗೌರವಾನ್ವಿತ ಅನಸ್ತೇಷಿಯಾ ತಜ್ಞರಾಗಿ ಕಾರ್ಯನಿರ್ವಹಿಸುತ್ತಿದ್ದ, ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ ಹಾಗೂ ಜ.ಜ.ಮು. ವೈದ್ಯಕೀಯ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರೂ, ಹೆಸರಾಂತ ಅನಸ್ತೇಷಿಯಾ ತಜ್ಞರೂ, ಹಿರಿಯ ವೈದ್ಯರೂ, ನಮ್ಮ ಒಡನಾಡಿಗಳೂ ಆಗಿದ್ದ

**ಡಾ॥ ಡಿ.ಎಂ.ಜಿ. ಶಿವಾನಂದಪ್ಪ** ಅವರಿಗೆ

ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಡಾ॥ ಬಿ.ಎಸ್. ನಾಗಪ್ರಕಾಶ್ | ಡಾ॥ ಬಿ.ಎನ್. ಅಭಿಷೇಕ್**

**ಮತ್ತು ಸಿಬ್ಬಂದಿ ವರ್ಗದವರು**

**ಯುನಿಟಿ ಹೆಲ್ತ್ ಸೆಂಟರ್**

ಶ್ರೀ ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

॥ ಶ್ರೀ ಕೊಟ್ಟೂರೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



**ಶ್ರೀ ಕಣಕುಪ್ಪಿ ಶಿವನಾಗಪ್ಪ**

ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು. ನನ್ನ ಧರ್ಮಪತ್ನಿ

**ಶ್ರೀಮತಿ ವೀರಮ್ಮ ಕಣಕುಪ್ಪಿ**

ಇವರು ದಿನಾಂಕ 15.02.2021ರ ಸೋಮವಾರ ಬೆಳಿಗ್ಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ಮೃತರ ಆತ್ಮಶಾಂತಿಗಾಗಿ ತತ್ಸಂಬಂಧವಾದ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 19.02.2021 ನೇ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ, ವಿನೋಬನಗರ 3ನೇ ಮೇನ್, 8ನೇ ಕ್ರಾಸ್‌ನ ಯಲ್ಲಮ್ಮ ನಗರದ ಮೃತರ ಸ್ವಗೃಹದಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಕಣಕುಪ್ಪಿ ಶಿವನಾಗಪ್ಪ ಮತ್ತು ಮಕ್ಕಳು, ಅಳಿಯಂದಿರು, ಸೊಸೆ ಹಾಗೂ ಮೊಮ್ಮಕ್ಕಳು.**

**ಮೊ 98447 09499, 77602 05961**

## ಅತ್ತಿಗೆರೆ ಗ್ರಾಮದಲ್ಲಿ ಅಧಿಕಾರಿಗಳ ಗ್ರಾಮ ವಾಸ್ತವ್ಯ : ಅಹವಾಲು ಸ್ವೀಕಾರ

ದಾವಣಗೆರೆ ಫೆ. 18 - ನಾಡಿದ್ದು ದಿನಾಂಕ 20 ರಂದು ದಾವಣಗೆರೆ ತಾಲ್ಲೂಕಿನ ತಹಶೀಲ್ದಾರ್‌ರವರನ್ನು ಒಳಗೊಂಡಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ದಾವಣಗೆರೆ ತಾಲ್ಲೂಕಿನ ಲೋಕಿಕೆರೆ ಹೋಬಳಿ ಅತ್ತಿಗೆರೆ ಗ್ರಾಮಕ್ಕೆ ಭೇಟಿ ನೀಡಿ ವಾಸ್ತವ್ಯ ಮಾಡುತ್ತಿದ್ದಾರೆ.

ಈ ದಿನಾಂಕದಂದು ಅತ್ತಿಗೆರೆ ಗ್ರಾಮದ ಸಾರ್ವಜನಿಕರು ತಮ್ಮ ಕುಂದು-ಕೊರತೆಗಳನ್ನು ಪರಿಹರಿಸಿಕೊಳ್ಳಬಹುದು. ಆದ್ದರಿಂದ ಗ್ರಾಮದ ಎಲ್ಲಾ ಸಾರ್ವಜನಿಕರು ನಾಡಿದ್ದು ದಿನಾಂಕ 20 ರಂದು ತಮ್ಮಗಳ ಅಹವಾಲುಗಳೊಂದಿಗೆ ಹಾಜರಾಗಿ, ಪರಿಹಾರ ಕಂಡುಕೊಳ್ಳಬಹುದೆಂದು ತಹಶೀಲ್ದಾರ್ ಬಿ.ಎನ್ ಗಿರೀಶ್ ತಿಳಿಸಿದ್ದಾರೆ.

## ಶರಣೆ ಜಯಮ್ಮನವರು ನಿಧನ



ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು ಕತ್ತಲಗೆರೆ ವಾಸಿಯಾದ ಅತ್ತಿಗೆರೆ ದಿ. ಸದಾಶಿವಪ್ಪನವರ ಧರ್ಮಪತ್ನಿ

**ಶರಣೆ ಜಯಮ್ಮನವರು**

(70) ಇವರು ದಿನಾಂಕ 18.02.2021 ರ ಗುರುವಾರ ಬೆಳಿಗ್ಗೆ 11.25ಕ್ಕೆ ನಿಧನರಾಗಿರುತ್ತಾರೆ. ಮೂವರು ಪುತ್ರಿಯರು, ಅಳಿಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ 19.02.2021 ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಕತ್ತಲಗೆರೆಯ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು

**ಶ್ರೀ ಅತ್ತಿಗೆರೆ ಎನ್.ಷಣ್ಮುಖಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಅತ್ತಿಗೆರೆ ವಂಶಸ್ಥರು ಹಾಗೂ ಬಂಧು-ಮಿತ್ರರು.**

**94828 14076, 99805 72567**

## ಎಂ. ಕನ್ನಪ್ಪ ನಿಧನ



ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದ ವಾಸಿ **ಎಂ.ಕನ್ನಪ್ಪ** (78) ಅವರು ದಿನಾಂಕ 18.02.2021 ರಂದು ಗುರುವಾರ ಮಧ್ಯಾಹ್ನ 2 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.02.2021 ರಂದು ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಬಿ.ಕಲಪನಹಳ್ಳಿ ಗ್ರಾಮದಲ್ಲಿ ನೆರವೇಲಿದೆ.

**ಇಂತಿ ದುಃಖತಪ್ತ ಕುಟುಂಬವರ್ಗ**

**99022 08150, 82174 10935**

# ಬಿಹಾರದಲ್ಲಿ ಬಿಜೆಪಿ ಸೋಲಿಗೆ ವಿಜಯೇಂದ್ರ ಹಣ

## ಬಸನಗೌಡ ಪಾಟೀಲ್ ಯತ್ನಾಳ್ ಗಂಭೀರ ಆರೋಪ

ಬೆಂಗಳೂರು, ಫೆ 18 - ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪುತ್ರ ವಿಜಯೇಂದ್ರ ತಮ್ಮ ಆಪ್ತರ ಮೂಲಕ ಹಣ ಕಳುಹಿಸಿದ್ದಾರೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಗಂಭೀರ ಆರೋಪ ಮಾಡಿದ್ದಾರೆ.

ಬಿಹಾರದಲ್ಲಿ ಬಿಜೆಪಿ ಸೋತರೆ ಪ್ರಧಾನಿಯವರ ಬಲ ಕುಗ್ಗುತ್ತದೆ. ಅದರಿಂದ ಇಲ್ಲಿನ ತಮ್ಮ ತಂದೆಯ ಆಡಳಿತಕ್ಕೆ ಯಾವುದೇ ರೀತಿಯ ಅಡಚಣೆ ಇರುವುದಿಲ್ಲ ಎಂಬ ಹಿನ್ನೆಲೆಯಲ್ಲಿ ವಿಜಯೇಂದ್ರ ಇಂತಹ ಕೆಲಸ ಮಾಡಿದ್ದಾರೆ ಎಂದು ದೂರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ವರಿಷ್ಠರು ನೀಡಿದ್ದ ನೋಟಿಸ್‌ಗೆ 11 ಪುಟಗಳ ಉತ್ತರ ನೀಡಿರುವುದಲ್ಲದೆ, ಮುಖ್ಯಮಂತ್ರಿ ಯಡಿಯೂರಪ್ಪ ಅವರಿಂದ ಸರ್ಕಾರಕ್ಕೆ ಹೇಗೆ ಕೆಟ್ಟ ಹೆಸರು ಬರುತ್ತದೆ ಎಂಬುದನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದೇನೆ ಎಂದು ತಿಳಿಸಿದ್ದಾರೆ.

ನರೇಂದ್ರ ಮೋದಿ ಅವರ ಆಶಯದಂತೆ ಕರ್ನಾಟಕದಲ್ಲೂ ಕುಟುಂಬ ಹಸ್ತಕ್ಷೇಪವಿಲ್ಲದ ಸರ್ಕಾರವಿರಬೇಕು ಎಂದಿರುವ ಯತ್ನಾಳ್, ಯಡಿಯೂರಪ್ಪ ಅವರ ಕುಟುಂಬದ ರಾಜಕಾರಣವನ್ನು 45ನೇ ಪ್ಯಾರಾದಲ್ಲಿ ಬರೆದಿದ್ದೇನೆ. ಅವರ ಕುಟುಂಬ ಬಿಜೆಪಿ ಶಾಸಕರಿಗೆ ಗೌರವಿಸುತ್ತಿಲ್ಲ. ಬಿಜೆಪಿಯ ಆಶಯಕ್ಕೆ ತಕ್ಕಂತೆ ಅಧಿಕಾರ ನಡೆಸುತ್ತಿಲ್ಲ ಎಂದು ಟೀಕಿಸಿದರು.

ಬಿಹಾರ ಚುನಾವಣೆಗೆ ಸಂಬಂಧಿಸಿದಂತೆ ಮುಂದುವರೆದು ಮಾತನಾಡಿದ ಅವರು, ಬಿಜೆಪಿ ಅಧಿಕಾರಕ್ಕೆ ಬರದಂತೆ ಬಿಹಾರದಲ್ಲಿ ನಡೆಸಿದ ಇವರ ಕುತಂತ್ರದ ಬಗ್ಗೆ ತನಿಖೆಯಾಗಬೇಕು. ಇವರು ಕಾಂಗ್ರೆಸ್ ಪಾಲಿನ ಆರ್‌ಜೆಡಿ ಪಕ್ಷಗಳಿಗೆ ವಿಜಯೇಂದ್ರ ಹಣ ಪೂರೈಕೆ ಮಾಡಿದ್ದಾರೆ ಎಂದು ದೂರಿದರು.

ಭ್ರಷ್ಟಾಚಾರ ಹಸ್ತಕ್ಷೇಪ ವರ್ಗಾವಣೆ ದಂಧೆ ಬಗ್ಗೆ ತನಿಖೆ ಮಾಡಬೇಕು. ನೋಟಿಸ್‌ಗೆ ಉತ್ತರ ಕೊಡುವಾಗ ನಾನು ಎಲ್ಲಿಯೂ ಕ್ಷಮೆಯಾಚಿಸಿಲ್ಲ. ಅದರ ಬದಲು ಸಿ.ಡಿ. - ಇ.ಡಿ. ಬಗ್ಗೆಯೂ ಉಲ್ಲೇಖಿಸಿದ್ದೇನೆ. ಮಾರಿಷಸ್ ವಿಚಾರವನ್ನೂ ಬರೆದಿದ್ದೇನೆ. ಮಾರಿಷಸ್‌ಗೆ ಯಾಕೆ ಹೋಗಿದ್ದರು, ಎಷ್ಟು ಮಂದಿ ಹೋಗಿದ್ದರು, ಯಾವ ಫ್ಲೈಟ್‌ನಲ್ಲಿ ಹೋಗಿದ್ದರು, ಫ್ಲೈಟ್ ನಂಬರ್ ಏನು ಎಂಬ ಮಾಹಿತಿ ನೀಡಿದ್ದೇನೆ ಎಂದವರು ಹೇಳಿದ್ದಾರೆ.

# ರೈತ ವಿರೋಧಿ ಕಾಯ್ದೆಗಳನ್ನು ವಿರೋಧಿಸಿ ಪ್ರತಿಭಟನೆ



ಹರಪನಹಳ್ಳಿ, ಫೆ.18 - ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೆ ತಂದಿರುವ ರೈತ ವಿರೋಧಿ ಕಾಯ್ದೆಗಳನ್ನು ರದ್ದು ಪಡಿಸಬೇಕು. ದೆಹಲಿಯಲ್ಲಿ ಹೋರಾಡುತ್ತಿರುವ ರೈತರಿಗೆ ಬೆಂಬಲ ಸೂಚಿಸಲು ಸುಗ್ರೀವಾಜ್ಞೆ ಮುಖಾಂತರ ತಂದಿರುವ ಈ ತಿದ್ದುಪಡಿಗಳನ್ನು ಹಿಂಪಡೆಯಬೇಕು. ರೈತರ ಹಿತಾಸಕ್ತಿಗಳನ್ನು ಕಾಪಾಡಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್, ಯುವ ಕಾಂಗ್ರೆಸ್, ಎನ್‌ಎಸ್‌ಯುಐ ಮಹಿಳಾ ಸಂಘಟನೆಗಳು. ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ತಾಲ್ಲೂಕಿನ ದೇವರ ತಿಮ್ಮಲಾಪುರದ ವೆಂಕಟೇಶ್ವರ ದೇವಸ್ಥಾನದಿಂದ ಬೃಹತ್ ಟ್ರ್ಯಾಕ್ಟರ್ ಆಟೋ, ಒಂಟೆತ್ತಿನ ಬಂಡಿಗಳ ರ‍್ಯಾಲಿ ಮತ್ತು ಪಾದಯಾತ್ರೆಯು ಹರಪನಹಳ್ಳಿ ಪಟ್ಟಣದ ಪ್ರಮುಖ ರಸ್ತೆಯ ಮೂಲಕ ಮಿನಿ ವಿಧಾನಸೌಧಕ್ಕೆ ತೆರಳಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಕೆಪಿಸಿಸಿ ಮಾಧ್ಯಮ ವಿಶ್ಲೇಷಕರಾದ ಎಂ.ಪಿ.ವೀಣಾ ಮಹಾಂತೇಶ್ ಚರಂತಿಮಠ ಮಾತನಾಡಿ, ಕೇಂದ್ರ ಬಿಜೆಪಿ ಸರ್ಕಾರ ದೇಶದ ಹಾಗೂ ರಾಜ್ಯದ ಜನರನ್ನು ಲೂಟಿ ಮಾಡುತ್ತಿದೆ. ಇಂಧನ. ತೈಲ ಬೆಲೆ ಗಗನಕ್ಕೇರುತ್ತಿದೆ. ಅಡುಗೆ ಅನಿಲ ದುಬಾರಿಯಾಗಿದೆ. ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರಗಳು ಹೆಚ್ಚಿನ ತೆರಿಗೆ ಹೊರೆ ಹೇರಿವೆ. ರೈತರು ಮಧ್ಯಮ ವರ್ಗದವರಿಂದ ಕಳೆದ ಆರೂವರೆ ವರ್ಷದಲ್ಲಿ 20 ಲಕ್ಷ ಕೋಟಿ ರೂ. ಲೂಟಿ ಮಾಡಲಾಗಿದೆ ಎಂದು ಕಿಡಿ ಕಾರಿದರು.

**ಹರಪನಹಳ್ಳಿ**

ಅದಾನಿ, ಅಂಬಾನಿ, ರಿಲಯನ್ಸ್, ಬಿಗ್‌ಬಜಾರ್, ಅಮೆಜಾನ್, ಫ್ಲಿಫ್‌ಕಾರ್ಟ್, ವಾಲ್‌ಮಾರ್ಟ್‌ನಂತಹ ದೈತ್ಯ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ರೈತರ ಕೊರೊನಾ ಸಂಕಷ್ಟದ ಸಮಯವನ್ನು ಸರ್ಕಾರ ಬಳಸಿಕೊಂಡಿದೆ. ಬಹುರಾಷ್ಟ್ರೀಯ ದೊಡ್ಡ ಕಂಪನಿಗಳಿಗೆ ಅವಕಾಶ ಮಾಡಿಕೊಡುವುದರಿಂದ ರೈತರ ಹಿತವನ್ನು ಬಲಿಕೊಟ್ಟಂತಾಗುತ್ತದೆ. ಜೊತೆಗೆ ರೈತರು ಮೊದಲು ಹೆಚ್ಚಿನ ಬೆಲೆಗೆ ಖರೀದಿಸುವ ಈ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವುದರಿಂದ ಸಣ್ಣಪುಟ್ಟ ಖರೀದಿದಾರರು ವ್ಯಾಪಾರದಿಂದ ದೂರ ಉಳಿಯುತ್ತಾರೆ. ಶತಮಾನಗಳಿಂದ ಕೊಂಡಿಯಂತಿರುವ ರೈತರು ಹಾಗೂ ವ್ಯಾಪಾರಸ್ಥರನ್ನು ಬೇರೆ ಮಾಡುವುದೇ ಸುಗ್ರೀವಾಜ್ಞೆಯ ಉದ್ದೇಶದಂತಿದೆ ಎಂದು ಹೇಳಿದರು.

ಪ್ರಗತಿಪರ ಸಂಘಟನೆಯ ಹೊಸಹಳ್ಳಿ ಮಲ್ಲೇಶ್ ಮಾತನಾಡಿ, ರೈತರಿಗೆ ಮಾರಕವಾಗಿರುವ ಭೂ ಸುಧಾರಣೆ ಕಾಯ್ದೆ ತಿದ್ದುಪಡಿ, ಎಪಿಎಂಸಿ ಕಾಯ್ದೆ ತಿದ್ದುಪಡಿ, ಕಾರ್ಮಿಕ ಕಾಯ್ದೆ ತಿದ್ದುಪಡಿ ಕೈ ಬಿಡಬೇಕು. ಜನಸಾಮಾನ್ಯರಿಗೆ ಅಗತ್ಯವಾಗಿರುವ ಪೆಟ್ರೋಲ್, ಡೀಸೆಲ್, ಗ್ಯಾಸ್, ವಿದ್ಯುತ್ ಹಾಗೂ ಅಗತ್ಯ ವಸ್ತುಗಳ ಬೆಲೆ ಇಳಿಕೆ ಮಾಡಬೇಕು ಎಂದು ಆಗ್ರಹಿಸಿದರು.

ಪುರಸಭೆ ಮಾಜಿ ಅಧ್ಯಕ್ಷರಾದ ಕವಿತಾ ವಾಗೀಶ್, ಚಿಗಟೇರಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಹೆಚ್.ಶಿವರಾಜ್, ವಕೀಲ ಕರೆಗೌಡರ ಸಿದ್ಧಲಿಂಗನ ಗೌಡ, ವಿವಿಧ ಸಂಘಟನೆಗಳ ಮುಖಂಡರಾದ ಗುಡಿಹಳ್ಳಿ ಹಾಲೇಶ್, ಬಳಿಗನೂರು ಕೊಟ್ರೇಶ್, ಎ.ಡಿ.ದ್ವಾರಕೇಶ್ ಮಹಿಳಾ ಸಂಘದ ಶಂಷಾದ್ ಬೇಗಂ, ಭಾಗ್ಯಮ್ಮ, ಗಾಯಿತ್ರಮ್ಮ, ಪೂಜಾರ್ ಆನಂದ, ಮನೋಜ್, ದಾದಾಪೀರ್, ತಿಮ್ಮಲಾಪುರದ ನಾಗರಾಜ್, ಹನುಮಕ್ಕ, ಹರಪನಹಳ್ಳಿ ಜಿಲ್ಲಾ ಹೋರಾಟ ಸಮಿತಿಯ ಮೌಲ್ವಿ ಖಾಜಾ ಮುಸ್ತಾಕ್ ಅಹ್ಮದ್ ರಜ್ವಿ ಸೇರಿದಂತೆ ಇನ್ನೂ ಅನೇಕರು ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು.

# ನಗರದಲ್ಲಿ ಇಂದು 'ಸಾಯಿ ಭಾಸ್ಕರ ನಮನ'

ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಗಳ ವತಿಯಿಂದ ಶ್ರೀ ಸತ್ಯಸಾಯಿ ಬಾಬಾರವರ 95 ನೇ ಜನ್ಮ ದಿನೋತ್ಸವದ ಪ್ರಯುಕ್ತ, ರಥ ಸಪ್ತಮಿಯ ಅಂಗವಾಗಿ 'ಸಾಯಿ ಭಾಸ್ಕರ ನಮನ' ಕಾರ್ಯಕ್ರಮವು ಇಂದು ನಡೆಯಲಿದೆ.

ಶ್ರೀ ಸತ್ಯಸಾಯಿ ಮಂದಿರದ ಆವರಣದಲ್ಲಿ ನಡೆಯಲಿದೆ. ಬೆಳಿಗ್ಗೆ 5.10 ರಿಂದ ಓಂಕಾರ, ಸುಪ್ರಭಾತ ಮತ್ತು ಸಾಯಿ ಗಾಯತ್ರಿ ಪಠಣ ನಡೆಯಲಿದೆ. 5.30 ಕ್ಕೆ ರಾಜ್ಯದ ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಗಳ ರಾಜ್ಯಾಧ್ಯಕ್ಷ ವೆಂಕಟರಮಣ ಗೋಸಾವಿ ಅವರು ಪ್ರಶಾಂತಿ ಧ್ವಜಾರೋಹಣ ನಡೆಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ನಂತರ ಒಂದೆಡೆಯಲ್ಲಿ ಸೂರ್ಯ ಹೋಮ, ಗಣ ಹೋಮ ಮತ್ತು ಶ್ರೀ ಸಾಯಿ ಗಾಯತ್ರಿ ಹೋಮ ನಡೆಯಲಿದೆ. ಅದೇ ಸಮಯದಲ್ಲಿ 20 ಕ್ಕೂ ಹೆಚ್ಚು ಯೋಗ ಕೇಂದ್ರಗಳ 108 ಯೋಗ ಬಂಧುಗಳಿಂದ 108 ಬಾರಿ ಸಾಮೂಹಿಕ ಸೂರ್ಯ ನಮಸ್ಕಾರಗಳ ಸಮರ್ಪಣೆ ನಡೆಯಲಿದೆ.

# ಆಂಧ್ರ ಉದ್ಯಮದ ಮೇಲೆ ದಾಳಿ 161 ಕೋಟಿ ರೂ. ಆಸ್ತಿ ವಶ

ನವದೆಹಲಿ, ಫೆ. 18 – ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಆಂಧ್ರ ಪ್ರದೇಶದ ಹಣಕಾಸು ಹಾಗೂ ಚಿತ್ರ ವಿತರಣಾ ಉದ್ಯಮವೊಂದರ ಮೇಲೆ ದಾಳಿ ನಡೆಸಿದ್ದು, 161 ಕೋಟಿ ರೂ.ಗಳ ಅಘೋಷಿತ ಆಸ್ತಿ ವಶಪಡಿಸಿಕೊಂಡಿದ್ದಾರೆ.

ಕಳೆದ ಜನವರಿ 28ರಂದು ಆಂಧ್ರ ಪ್ರದೇಶ ಹಾಗೂ ತೆಲಂಗಾಣದ 21 ತಾಣಗಳ ಮೇಲೆ ದಾಳಿ ನಡೆಸಲಾಗಿತ್ತು. ಈಲೂರು ಮೂಲದ ಈ ಕಂಪನಿ, ಹಲವಾರು ತಾಣಗಳಲ್ಲಿ ಭಾರೀ ಪ್ರಮಾಣದ ನಗದು ಹಾಗೂ ಬಂಗಾರ ಹೊಂದಿತ್ತು ಎಂದು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

# 21 ಕಡ್ಲೇಬಾಳು ಆಂಜನೇಯ ಬ್ರಹ್ಮ ರಥೋತ್ಸವ

ದಾವಣಗೆರೆ ತಾಲ್ಲೂಕು ಕಡ್ಲೇಬಾಳು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವ 21 ರಂದು ನಡೆಯಲಿದ್ದು, ಈ ಸಂಬಂಧ ಇಂದಿನಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ತಹಶೀಲ್ದಾರ್ ಬಿ.ಎನ್. ಗಿರೀಶ್ ತಿಳಿಸಿದ್ದಾರೆ.

ರಥಸಪ್ತಮಿಯಾದ ಇಂದು ನಾಂದಿ, ಕಂಕಣ, ಬಲಿಹರಣ ನಡೆಯಲಿದ್ದು, ಸ್ವಾಮಿಗೆ ಪಂಚಾಮೃತ ಅಭಿಷೇಕ, ಅಂಕುರಾರ್ಪಣೆ ಹಾಗೂ ಮಹಾಮಂಗಳಾರತಿ ನಡೆಯಲಿದೆ. ಫೆ.20 ರ ಶನಿವಾರ ಭೀಷ್ಮಾಷ್ಟಮಿಯಂದು ಪವಮಾನ ಹೋಮ, ಬಲಿ ಹರಣ, ಮಹಾಮಂಗಳಾರತಿ ನೆರವೇರಲಿದೆ.

21ರ ಭಾನುವಾರ ಮಧ್ವನವಮಿಯಂದು ಪಂಚಾಮೃತ ಅಭಿಷೇಕ, ವಿಶೇಷ ಪೂಜೆ, ಹೋಮ ಹವನ ನೆರವೇರಲಿದೆ. ಮಧ್ಯಾಹ್ನ 12.30 ಕ್ಕೆ ಶ್ರೀ ಆಂಜನೇಯ ಸ್ವಾಮಿ ಬ್ರಹ್ಮರಥೋತ್ಸವ ಹಾಗೂ ರಾತ್ರಿ 8 ಕ್ಕೆ ರಥೋತ್ಸವ ನಡೆಯಲಿದೆ. ನಂತರ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗವಿದೆ.

ಫೆ.22 ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಅವಭೃತ (ಓಕಳಿ) ಹಾಗೂ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ, ಪಂಚಾಮೃತ ಅಭಿಷೇಕ, ನೈವೇದ್ಯ, ಮಹಾ ಮಂಗಳಾರತಿ, ತೀರ್ಥ-ಪ್ರಸಾದವಿರುತ್ತದೆ. ಭಜನಾ ಮಂಡಳಿಗಳಿಂದ ಭಜನೆ ಇರುತ್ತದೆ.

# ಆಸ್ಟ್ರೇಲಿಯಾ : ಸುದ್ದಿ ಹಂಚಿಕೆಗೆ ಫೇಸ್‌ಬುಕ್ ತಡೆ

ಕ್ಯಾನ್‌ಬೆರಾ, ಫೆ. 18 - ಅಚ್ಚರಿಯ ಬೆಳವಣಿಗೆಯೊಂದರಲ್ಲಿ ಆಸ್ಟ್ರೇಲಿಯಾದ ಜನರು ಸುದ್ದಿಗಳನ್ನು ಹಂಚಿಕೊಳ್ಳುವುದನ್ನು ಫೇಸ್‌ಬುಕ್ ತಡೆದಿದೆ. ಇದರಿಂದಾಗಿ ಸರ್ಕಾರ ಹಾಗೂ ಟೆಕ್ ಕಂಪನಿಗಳ ಸಮರ ಉಲ್ಬಣಿಸಿದೆ.

ಸುದ್ದಿಗಳನ್ನು ಹಂಚಿಕೊಳ್ಳುವ ಟೆಕ್ ಕಂಪನಿಗಳು, ಅದರ ಲಾಭವನ್ನು ಸುದ್ದಿ ಮಾಧ್ಯಮಗಳ ಜೊತೆ ಹಂಚಿಕೊಳ್ಳಬೇಕು ಎಂದು ಆಸ್ಟ್ರೇಲಿಯಾ ಪ್ರತಿಪಾದಿಸಿತ್ತು. ಫೇಸ್‌ಬುಕ್ ಈ ನಿಲುವನ್ನು ವಿರೋಧಿಸಿತ್ತು.

ಸುದ್ದಿಗಳ ಜೊತೆಗೆ ಆಸ್ಟ್ರೇಲಿಯಾ ಸರ್ಕಾರ ರುತ್ತು ಸೇವೆಗಳ ಕುರಿತು ಸಂದೇಶ ನೀಡುವುದನ್ನೂ ತಡೆಯಲಾಗಿದೆ ಹಾಗೂ ಕೆಲ ವಾಣಿಜ್ಯ ಪುಟಗಳನ್ನೂ ತಡೆಯಲಾಗಿದೆ. ಈ ಕ್ರಮವನ್ನು ಆಸ್ಟ್ರೇಲಿಯಾ ಸರ್ಕಾರ ಖಂಡಿಸಿದೆ.

ಆಸ್ಟ್ರೇಲಿಯಾದ ರೀತಿಯಲ್ಲೇ ಇತರೆ ದೇಶಗಳೂ ಸಹ ಸುದ್ದಿ ಹಂಚಿಕೊಳ್ಳುವುದರ ನಿಯಮ ಬದಲಿಸಬಹುದು ಎಂಬ ಕಳವಳ ಫೇಸ್‌ಬುಕ್‌ಗೆ ಇದೆ. ಫೇಸ್‌ಬುಕ್ ಹಾಗೂ ಗೂಗಲ್‌ಗಳು ಆಸ್ಟ್ರೇಲಿಯಾದ ಪತ್ರಿಕೋದ್ಯಮಕ್ಕೆ ಪಾವತಿ ಮಾಡುವುದನ್ನು ಕಡ್ಡಾಯಗೊಳಿಸಲು ಅಲ್ಲಿನ ಜನಪ್ರತಿನಿಧಿಗಳ ಸಭೆ ನಿರ್ಣಯ ತಗೆದುಕೊಂಡಿತ್ತು. ಆನಂತರ ಯಾವುದೇ ಎಚ್ಚರಿಕೆ ನೀಡದೇ ಫೇಸ್‌ಬುಕ್ ಸುದ್ದಿಗಳನ್ನು ತಡೆದಿದೆ ಎಂದು ಸದನದ ಖಜಾಂಚಿ ಜೋಶ್ ಫ್ರೈಡೆನ್‌ಬರ್ಗ್ ಹೇಳಿದ್ದಾರೆ.

ಆಸ್ಟ್ರೇಲಿಯಾದ ಸೆನೆಟ್ ಅಂಗೀಕಾರದ ನಂತರವೇ ಈ ಮಸೂದೆಯು ಕಾಯ್ದೆಯಾಗಲಿದೆ. ಆಸ್ಟ್ರೇಲಿಯಾದ ಸುದ್ದಿ ಸಂಘಟನೆಗಳು ಯಾವುದೇ ಹೊಸ ಸುದ್ದಿಗಳನ್ನು ಫೇಸ್‌ಬುಕ್‌ನಲ್ಲಿ ಪ್ರಕಟಿಸಲು ಸಾಧ್ಯವಾಗಿಲ್ಲ. ಹಾಲಿ ಇರುವ ಸುದ್ದಿಗಳನ್ನೂ ಜನರು ಹಂಚಿಕೊಳ್ಳಲು ಸಾಧ್ಯವಾಗಿಲ್ಲ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಫೇಸ್‌ಬುಕ್, ಆಸ್ಟ್ರೇಲಿಯಾದ ಎಲ್ಲಾ ಸುದ್ದಿ ಪುಟಗಳ ಪ್ರಕಟಣೆ ನಿಲ್ಲಿಸಲಾಗಿದೆ. ಜಾಗತಿಕವಾಗಿಯೂ ಆಸ್ಟ್ರೇಲಿಯಾದಿಂದ ಬರುವ ಸುದ್ದಿ ಪ್ರಕಟಣೆಗಳ ಮೇಲೆ ನಿರ್ಬಂಧ ಹೇರಲಾಗಿದೆ ಎಂದು ತಿಳಿಸಿದೆ.

ಫೇಸ್‌ಬುಕ್‌ನ ಕ್ರಮದ ಬಗ್ಗೆ ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಅವರು ತಮ್ಮ ಫೇಸ್‌ಬುಕ್ ಪುಟದಲ್ಲಿ ಟೀಕಿಸಿದ್ದಾರೆ. ಫೇಸ್‌ಬುಕ್ ಕ್ರಮಗಳಿಂದ ಅದು ಆಸ್ಟ್ರೇಲಿಯಾವನ್ನು ದೂರು ಮಾಡಿಕೊಂಡಿದೆ. ಆರೋಗ್ಯ ಹಾಗೂ ತುರ್ತು ಸೇವೆಗಳ ಮಾಹಿತಿಯನ್ನು ತಡೆದಿದೆ. ಫೇಸ್‌ಬುಕ್ ಉದ್ಧಟವಾಗಿ ವರ್ತಿಸುತ್ತಿದೆ ಎಂದು ಮಾರಿಸನ್ ಹೇಳಿದ್ದಾರೆ.

ದೊಡ್ಡ ಟೆಕ್ ಕಂಪನಿಗಳು ತಾವು ಸರ್ಕಾರಗಳಿಗಿಂತ ದೊಡ್ಡವರು ಹಾಗೂ ನಿಯಮಗಳು ತಮಗೆ ಅನ್ವಯವಾಗುವುದಿಲ್ಲ ಎಂದ ಎಂಬುದನ್ನು ಈ ಕ್ರಮ ತೋರಿಸುತ್ತದೆ. ಕಂಪನಿಗಳು ವಿಶ್ವವನ್ನು ಬದಲಿಸುತ್ತಿರುವುದು. ಆದರೆ, ಅವು ದೇಶವನ್ನು ನಡೆಸಬಹುದು ಎಂಬುದು ಇದರರ್ಥವಲ್ಲ ಎಂದು ಮಾರಿಸನ್ ತಿಳಿಸಿದ್ದಾರೆ.

ಗೂಗಲ್ ಸಹ ಆಸ್ಟ್ರೇಲಿಯಾದಲ್ಲಿ ತನ್ನ ಶೋಧ ಸೇವೆಗಳನ್ನು ನಿಲ್ಲಿಸುವುದಾಗಿ ಎಚ್ಚರಿಸಿತ್ತು. ನಂತರದಲ್ಲಿ ಆಸ್ಟ್ರೇಲಿಯಾದ ಮಾಧ್ಯಮಗಳ ಜೊತೆ ತನ್ನದೇ ಆದ ಸುದ್ದಿ ಮಾದರಿ ಕುರಿತು ಚರ್ಚಿಸಿದ ನಂತರ ಬೆದರಿಕೆಯಿಂದ ಹಿಂದೆ ಸರಿದಿತ್ತು.

## ಹೊನ್ನಾಳಿಯಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ಹೊನ್ನಾಳಿ, ಫೆ.18- ಹೊನ್ನಾಳಿ ಉಪವಿಭಾಗ ವ್ಯಾಪ್ತಿಯಲ್ಲಿರುವ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕಾಮಗಾರಿ ಪ್ರಯುಕ್ತ ದಿ. 20 ರ ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವಿತರಣಾ ಕೇಂದ್ರದಿಂದ ಸರಬರಾಜಾಗುವ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಬಸ್ ಸೌಲಭ್ಯಕ್ಕಾಗಿ ವಿದ್ಯಾರ್ಥಿಗಳ ಒತ್ತಾಯ



**ಜಿಲ್ಲಾಡಳಿತದ ಮುಂದೆ ವಿದ್ಯಾರ್ಥಿಗಳ ಪ್ರತಿಭಟನೆ**

ದಾವಣಗೆರೆ, ಫೆ.18- ಶಾಲಾ-ಕಾಲೇಜುಗಳಿಗೆ ಸರ್ಕಾರಿ ಬಸ್ ಸೌಲಭ್ಯ ಒದಗಿಸುವಂತೆ ಆಗ್ರಹಿಸಿ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ಚನ್ನಗಿರಿ-ದಾವಣಗೆರೆ ಮಾರ್ಗವಾದ ಕೆರೆಬಿಳಚಿ, ತ್ಯಾವಣಿಗೆ, ಮತ್ತಿ, ಬೆಳಲಗೆರೆ, ಮಿಯ್ಯಾಪುರ, ನಲ್ಕುದುರೆ, ಕದರನಹಳ್ಳಿ, ಗೋಣಿವಾಡ ದೊಡ್ಡಘಟ್ಟ, ಕುಕ್ಕುವಾಡ, ಹದಡಿ ಗ್ರಾಮಗಳಿಂದ ಪ್ರತಿನಿತ್ಯ ಸುಮಾರು 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಜಿಲ್ಲಾ ಕೇಂದ್ರದಲ್ಲಿನ ಶಾಲಾ-ಕಾಲೇಜುಗಳಿಗೆ ಬರುತ್ತಾರೆ.

ಈ ವಿದ್ಯಾರ್ಥಿಗಳೆಲ್ಲಾ ಬಸ್ ಪಾಸ್ ಮಾಡಿಸಿಕೊಂಡಿದ್ದರೂ ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆ ಇಲ್ಲದ ಕಾರಣ ಖಾಸಗಿ ಬಸ್‌ಗಳನ್ನು ಆಶ್ರಯಿಸಬೇಕಾಗಿದೆ. ಇದರಿಂದ ಹಣವನ್ನು ವ್ಯಯ ಮಾಡುವಂಥ ಪರಿಸ್ಥಿತಿ ಒಂದೊದಗಿದೆ. ಅಲ್ಲದೇ ಬಸ್‌ನಲ್ಲಿ ಸುಮಾರು 80 ರಿಂದ 90 ಜನರು ಪ್ರಯಾಣ ಮಾಡುತ್ತಿದ್ದಾರೆ.

ವಿದ್ಯಾರ್ಥಿಗಳಿಗೆ ಅನುಕೂಲ ಆಗಲೆಂದು ಶಾಲಾ-ಕಾಲೇಜು ಸಮಯಕ್ಕೆ ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆ ಕಲ್ಪಿಸುವಂತೆ ವಿದ್ಯಾರ್ಥಿಗಳು ಜಿಲ್ಲಾಡಳಿತಕ್ಕೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಾಮಾಜಿಕ ಕಾರ್ಯಕರ್ತರಾದ ಹೈದರ್ ಅಲಿಖಾನ್, ವಿದ್ಯಾರ್ಥಿಗಳಾದ ಲೋಹಿತ್ ದೊಡ್ಡಘಟ್ಟ, ರಮೇಶ್ ಲಿಂಗರಾಜ್, ಪೂಜಾ ದೊಡ್ಡಘಟ್ಟ, ಸೋನು ಮತ್ತಿತರರು ಭಾಗವಹಿಸಿದ್ದರು.

ಸರ್ಕಾರಿ ಬಸ್ ಸೌಲಭ್ಯಕ್ಕೆ ಒತ್ತಾಯಿಸಿ ಪ್ರತಿಭಟನಾ ನಿರತ ವಿದ್ಯಾರ್ಥಿಗಳ ಬೇಡಿಕೆಯನ್ನು ಆಲಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು, ಕೊರೊನಾ ಸೋಂಕಿನ ಕಾರಣದಿಂದ ಬಸ್ ನಿಲುಗಡೆ ಮಾಡಲಾಗಿತ್ತು.

ಕೆಎಸ್‌ಆರ್‌ಟಿಸಿ ಡಿಸಿಗೆ ಬಸ್ ಸೌಕರ್ಯ ಕಲ್ಪಿಸುವಂತೆ ಸೂಚನೆ ನೀಡುತ್ತೇನೆ ಎಂದು ಭರವಸೆ ನೀಡಿದರು. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ಹಿಂಪಡೆದರು.

# ಬಿಸಲೇರಿ, ಮಹಾದೇವಪುರ ಗ್ರಾಮಸ್ಥರ ಪ್ರತಿಭಟನೆ

**ಗೋಮಾಳದ ಜಮೀನನ್ನು ಬಿಡಿಸಿಕೊಡುವಂತೆ ಆಗ್ರಹ**

ದಾವಣಗೆರೆ, ಫೆ. 18- ತಾಲ್ಲೂಕಿನ ಮುದಹದಡಿ ಗ್ರಾಮ ಪಂಚಾಯ್ತಿ, ಬಿಸಲೇರಿ-ಮಹಾದೇವಪುರ ಗ್ರಾಮದ ಗೋಮಾಳದ ಜಮೀನನ್ನು ಬಿಡಿಸಿಕೊಡುವಂತೆ ಒತ್ತಾಯಿಸಿ ಬಿಸಲೇರಿ-ಮಹಾದೇವಪುರ ಗ್ರಾಮಸ್ಥರು ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿಂದು ಪ್ರತಿಭಟನೆ ನಡೆಸಿದರು. ನಂತರ ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.

ಮುದಹದಡಿ ಗ್ರಾಮ ಪಂಚಾಯ್ತಿ ಬಿಸಲೇರಿ-ಮಹಾದೇವಪುರ ಗ್ರಾಮದಲ್ಲಿ 1978 ರಲ್ಲಿ ಮಹಾದೇವಪುರ ಗ್ರಾಮ ನಿರ್ಮಾಣವಾಯಿತು. ಆ ಸಮಯದಲ್ಲಿ ಅಲ್ಲಿದ್ದ 30-40 ಬಡ ಕುಟುಂಬಗಳಿಗೆ ಉಳುಮೆ ಮಾಡಿ, ಮನೆ ನಿರ್ಮಾಣ ಮಾಡಿಕೊಳ್ಳಲು ಪ್ರತಿ ಕುಟುಂಬಕ್ಕೆ ಅರ್ಧ ಎಕರೆ ಜಮೀನನ್ನು ಸರ್ಕಾರ ನೀಡಿ, 2002 ರಲ್ಲಿ ಹಕ್ಕು ಪತ್ರಗಳನ್ನು ನೀಡಿದೆ. 2017-18ರಲ್ಲಿ ಸರ್ವೆ ನಂ . 89, 90 ಮತ್ತು 95 ರ ಮಾಲೀಕರುಗಳಾದ ಉಜ್ಜಪ್ಪ ತಾಯಿ ರತ್ನಮ್ಮ, ಮಹಾಲಿಂಗಪ್ಪ, ರಾಮಮ್ಮ ಇವರುಗಳು ಒಟ್ಟು 2 ಎಕರೆ 7 ಗುಂಟೆ ಜಮೀನನ್ನು ಮಾರಿದ್ದು, ಸದರಿ ಜಮೀನನ್ನು ದಾವಣಗೆರೆಯ ನಿಟುವಳ್ಳಿಯ ನಿವಾಸಿ ಹೆಚ್.ಎನ್.ಮಂಜುನಾಥ್ ಇವರು ಖರೀದಿ ಮಾಡಿದ್ದಾರೆ. ಸದರಿ ಮಂಜುನಾಥ್ ರಿಯಲ್ ಎಸ್ಟೇಟ್ ವ್ಯವಹಾರವನ್ನು ನಡೆಸುತ್ತಿದ್ದರು. ತಾವು ಖರೀದಿಸಿರುವ ಮೇಲ್ಕಂಡ ಸರ್ವೇ ನಂಬರ್ ಜಮೀನಿನಲ್ಲಿ ಲೇಔಟ್ ಮಾಡಿದ್ದು, ಲೇಔಟ್ ಮಾಡುವಾಗ ಸ.ನಂ. 91 ರಲ್ಲಿ 28 ಗುಂಟೆ ಗೋಮಾಳ ಜಮೀನಿದ್ದು, ಸದರಿ ಗೋಮಾಳವನ್ನು ಆಕ್ರಮಿಸಿಕೊಂಡಿರುವುದಾಗಿ ಪ್ರತಿಭಟನಾಕಾರರು ಆರೋಪಿಸಿದರು.

ಇದನ್ನು ಗ್ರಾಮಸ್ಥರು ಮಂಜುನಾಥ್ ಇವರಿಗೆ ಪ್ರಶ್ನಿಸಿದಾಗ ತಾನು ಜಿಲ್ಲಾಧಿಕಾರಿಗಳಿಂದ ಹಾಗೂ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಲೇಔಟ್ ಮಾಡಿರುತ್ತೇನೆ ಮತ್ತು ತಾನು ಹೆಚ್ಚುವರಿ ಜಮೀನನ್ನು ಆಕ್ರಮಿಸಿಕೊಂಡಿರುವುದು ಸತ್ಯ ಎಂದು ಯಾವ ಮುಜುಗರ ಮತ್ತು ಅಂಜಿಕೆ ಇಲ್ಲದೆ ಗ್ರಾಮಸ್ಥರ ಬಳಿ ಒಪ್ಪಿಕೊಳ್ಳುತ್ತಿದ್ದಾನೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಬಿ.ಪಿ. ಶಿವನಗೌಡ್ರು, ತಿಮ್ಮನಗೌಡ, ಕರಿಬಸವರಾಜ, ಜಿ.ಎನ್. ವಾಸುದೇವ, ಕೃಷ್ಣಕುಮಾರ್, ಆರ್. ನಾಗರಾಜ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಈ ತಿಂಗಳಲ್ಲೇ ಕಾಂಗ್ರೆಸ್ ಸೇರಲಿರುವ ಶರತ್ ಬಚ್ಚೇಗೌಡ

ಬೆಂಗಳೂರು, ಫೆ. 18 - ಬಿಜೆಪಿ ಸಂಸದ ಬಿ.ಎನ್. ಬಚ್ಚೇಗೌಡ ಅವರ ಪುತ್ರ ಹಾಗೂ ಸ್ವತಂತ್ರ ಶಾಸಕ ಶರತ್ ಬಚ್ಚೇಗೌಡ ಅವರು ಈ ತಿಂಗಳಲ್ಲೇ ಕಾಂಗ್ರೆಸ್‌ಗೆ ಸೇರಲಿದ್ದಾರೆ. ಫೆಬ್ರವರಿ 26ರಂದು ಅವರು ಕಾಂಗ್ರೆಸ್ ಸೇರಲಿದ್ದಾರೆ ಎನ್ನಲಾಗಿತ್ತು. ಈ ಬಗ್ಗೆ ಹೇಳಿಕೆ ನೀಡಿರುವ ಬಚ್ಚೇಗೌಡ, ಯಾವುದೇ ದಿನಾಂಕ ನಿಗದಿಯಾಗಿಲ್ಲ. ಆದರೆ, ಈ ತಿಂಗಳಲ್ಲೇ ನಾನು ಕಾಂಗ್ರೆಸ್ ಶಾಸಕಾಂಗ ಪಕ್ಷ ಸೇರುತ್ತೇನೆ ಎಂದಿದ್ದಾರೆ.

# ಪುಲ್ವಾಮಾ ದಾಳಿ ಹುತಾತ್ಮರಿಗೆ ಮೊಂಬತ್ತಿ ಬೆಳಗಿ ಶ್ರದ್ಧಾಂಜಲಿ



ದಾವಣಗೆರೆ, ಫೆ.16- ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ದೇಶದ ವೀರ ಯೋಧರಿಗೆ ಬೇತೂರು ರಸ್ತೆ ಬಿಡಿಓ ಕಚೇರಿ ಹಿಂಭಾಗದ ರಸ್ತೆಯಲ್ಲಿ ಮೊಂಬತ್ತಿ ಬೆಳಗಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು ಎಂದು ಎಸ್. ಸೋಮೇಶ್ ತಿಳಿಸಿದ್ದಾರೆ.

## ಕೂಡ್ಲಿಗಿ : ಮನೆ ಮುಂದಿದ್ದ ಟಗರುಗಳ ಕಳವು

ಕೂಡ್ಲಿಗಿ,ಫೆ.18- ಮನೆ ಮುಂದೆ ಕಟ್ಟಲಾಗಿದ್ದ ಮೂರು ಟಗರುಗಳನ್ನು ಕಳ್ಳರು ಕಳವು ಮಾಡಿಕೊಂಡು ಹೋಗಿರುವ ಘಟನೆ ತಾಲ್ಲೂಕಿನ ಬಡೇಲಡಕು ಗ್ರಾಮದಲ್ಲಿ ಜರುಗಿದ್ದು ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


**ಕೆಲಸಕ್ಕೆ ಬೇಕಾಗಿದ್ದಾರೆ**

ದಾವಣಗೆರೆ ನಗರ ಹಾಗೂ ದಾವಣಗೆರೆ ಜಿಲ್ಲೆಯ ಸುತ್ತಮುತ್ತಲೂ ಡಾಟಾ ಎಂಟ್ರಿ ಆಪರೇಟರ್ ಕೆಲಸಕ್ಕೆ ಮತ್ತು ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಉತ್ತಮ ಮಾತುಗಾರಿಕೆಯುಳ್ಳ ಯುವಕ-ಯುವತಿಯರು ಬೇಕಾಗಿದ್ದಾರೆ. ಕೆಲಸಕ್ಕೆ ಬರುವ ಯುವಕ-ಯುವತಿಯರಿಗೆ ತಿಂಗಳಿಗೆ 8000/- ರಿಂದ 15000/- ರೂ.ಗಳವರೆಗೆ ಆಕರ್ಷಕ ಸಂಬಳವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

N.M. DIGITAL SOCIAL SERVICE TRUST (RG), MAHATHMA FAMILY HEALTH CARD CENTER, DAVANGERE. &
S.P. PUBLIC RELATION INFORMATION & CONSUMER SERVICE CENTER, DAVANGERE.
CONTACT NUMBERS : 91641 20002, 9964929101, 97439 37989

**SRI BASAVESHWARA CONVENT SCHOOL**
K.H.B. Colony, Bannikood Road, Kundavada.
**Mob: 99011-22602**

**TEACHERS WANTED**

**Trained Graduate Teacher (TGT) - 3 Nos**
( Hindi / English / Kannada )
Graduate in relevant subject with B.Ed
(English Fluency Must)

**Pre-Primary Teachers (LKG, UKG, Kindergarden) - 3 Nos**
Montessori NTT/ NTC / Montessori Diploma
(English Fluency Must)


## ಸಾರ್ವಜನಿಕ ಪ್ರಕಟಣೆ

**ಶ್ರೀಮತಿ ವೀರಮ್ಮ ಕೋಂ ಲೇಟ್ ದಾಸಪ್ಪ**, ವಯಸ್ಸು ಸುಮಾರು 65 ವರ್ಷ ಆದ ನಾನು ಕೊಂಡಜ್ಜಿ ರಸ್ತೆ, ಅಶೋಕನಗರ, ದಾವಣಗೆರೆ ಇಲ್ಲಿ ವಾಸವಾಗಿರುವ ನಾನು ನೀಡಿದ ಪ್ರಕಟಣೆ ಏನೆಂದರೆ: ದಾವಣಗೆರೆ ಸಿಟಿ, ದಾವಣಗೆರೆ ಗ್ರಾಮದ ರೀ ಸರ್ವೆ ನಂಬರ್ 125/2ಐ ವುಳ್ಳ ಜಮೀನಿನಲ್ಲಿ ವಾಸೋಪಯೋಗಕ್ಕೆ ವಿಂಗಡಿಸಿರುವ ಸೈಟುಗಳು ದಾವಣಗೆರೆ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರಿದ್ದು ಸದರಿ ಸೈಟುಗಳ ಪೈಕಿ ಸೈಟ್ ನಂಬರ್ 02 ಇದರ ಅಳತೆ 20x30 ಅಡಿವುಳ್ಳ ಜಾಗಕ್ಕೆ ಚಕ್ಕುಬಂದಿ:- **ಪೂರ್ವಕ್ಕೆ ಸೈಟ್ ನಂಬರ್ 1, ಪಶ್ಚಿಮಕ್ಕೆ ಸೈಟ್ ನಂಬರ್ 4, ಉತ್ತರಕ್ಕೆ : ರೀ ಸರ್ವೆ ನಂಬರ್ 126, ದಕ್ಷಿಣಕ್ಕೆ : ಪ್ಲಾನಿನಲ್ಲಿ ಕಂಡ 24 ಅಡಿ ಅಗಲದ ರಸ್ತೆ**, ಈ ಮಧ್ಯದ ಸೈಟನ್ನು ನನ್ನ ಪತಿಯವರಾದ **ಶ್ರೀ ದಾಸಪ್ಪ ಬಿನ್ ಕಂಠಿ ಮಲ್ಲಪ್ಪ** ಇವರು ಈ ಹಿಂದೆ ದಿನಾಂಕ 12.10.1998 ರಂದು ದಾವಣಗೆರೆ ಸಬ್ ರಿಜಿಸ್ಟರ್‌ರವರ ಆಫೀಸಿನ 1 ನೇ ಪುಸ್ತಕದ **2564ನೇ ಸಂಪುಟದ 143-145ನೇ ಪುಟಗಳಲ್ಲಿ ರಿ.ನಂ 4894/1998-99ನೇ ನಂಬರ್** ಆಗಿ ನನ್ನ ಪತಿಯವರ ಹೆಸರಿಗೆ ರಿಜಿಸ್ಟರ್ ಆಗಿರುತ್ತದೆ.

ಸದರಿ ನನ್ನ ಪತಿಯವರು ದಿನಾಂಕ 03.11.2009 ರಂದು ಮರಣ ಹೊಂದಿರುತ್ತಾರೆ.ಸದರಿ ನನ್ನ ಪತಿಯವರ ಹೆಸರಿಗೆ ಇರುವ ಪತ್ರವು ಮನೆಯನ್ನು ಖಾಲಿ ಮಾಡುತ್ತಿರುವಾಗ ಆಕಸ್ಮಾತ್ ಸದರಿ ಪತ್ರವು ಕಳೆದು ಹೋಗಿರುತ್ತದೆ. ಸದರಿ ಕಳೆದುಕೊಂಡ ಮೂಲ ಕ್ರಯ ಪತ್ರವು ಯಾರಿಗಾದರೂ ಸಿಕ್ಕಲ್ಲಿ ಅದನ್ನು ಮೇಲೆ ಕಾಣಿಸಿದ ನಿವೇಶನದ ಮಾಲೀಕಳಾದ ನನಗೆ ಈ ಪ್ರಕಟಣೆಗೊಂಡ ದಿನಾಂಕದಿಂದ 15 ದಿವಸದೊಳಗಾಗಿ ತಲುಪಿಸಬೇಕಾಗಿಯೂ ಕೋರುತ್ತೇನೆ.

**ದಿನಾಂಕ 18.02.2021**
**ದಾವಣಗೆರೆ**

ವಕೀಲರ ಸಹಿ/- **ತಿಪ್ಪೇಸ್ವಾಮಿ.ಎಸ್**
ವಕೀಲು & ಗೌರವ ಪಂಚಾಯ್ತಿದಾರರು
1ನೇ ಮುಖ್ಯ ರಸ್ತೆ, ವಿನೋಬ ನಗರ, ದಾವಣಗೆರೆ-6
**ಮೊ: 94827 97299**

**ಸಹಿ/-**
**ವೀರಮ್ಮ**
**99863 56798, 99801 56988**

# ಬಿಬಿಎಂಪಿ ನೌಕರರ ಮುಷ್ಕರ ಬೆಂಬಲಿಸಿ ಪಾಲಿಕೆ ನೌಕರರ ಪ್ರತಿಭಟನೆ



ದಾವಣಗೆರೆ, ಫೆ. 18- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರಿಗೆ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಆಗಿರುವ ಅನಾನೂಕೂಲತೆಗಳ ವಿರುದ್ಧ ಬೆಂಗಳೂರಿನಲ್ಲಿನ ಬಿಬಿಎಂಪಿ ನೌಕರರ ಮುಷ್ಕರ ಬೆಂಬಲಿಸಿ ನಗರದಲ್ಲಿಂದು ನಗರ ಪಾಲಿಕೆ ನೌಕರರು ಪ್ರತಿಭಟನೆ ನಡೆಸಿದರು.

ನಗರ ಪಾಲಿಕೆ ಆವರಣದಲ್ಲಿ ದಾವಣಗೆರೆ ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್ ನೇತೃತ್ವದಲ್ಲಿ ಜಮಾಯಿಸಿದ್ದ ನೌಕರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿದರು.

ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ 'ಎ' ಶ್ರೇಣಿಯ ಅಧಿಕಾರಿ ಅಥವಾ 74 ಸಾವಿರ ಮೇಲ್ಪಟ್ಟು ವೇತನ ಶ್ರೇಣಿ ಇರುವ ಅಧಿಕಾರಿಗಳ ನೇಮಕಾತಿಯನ್ನು ಸರ್ಕಾರ ಪ್ರಾಧಿಕಾರ ನೀಡಿರುವುದನ್ನು ಕೈಬಿಡಬೇಕು. ಕೋವಿಡ್ ಸೋಂಕಿನಿಂದ ಮೃತಪಟ್ಟ ನೌಕರರ ಅವಲಂಬಿತರಿಗೆ ಕೇಂದ್ರ ಸರ್ಕಾರ ಜಾರಿ ಮಾಡಿರುವ ಪ್ರಧಾನ್ ಮಂತ್ರಿ ಗರೀಬ್ ಕಲ್ಯಾಣ್ ಪ್ಯಾಕೇಜ್ ಜೀವ ವಿಮೆ ಮೊತ್ತ 30 ಲಕ್ಷಗಳನ್ನು ಮೃತ ನೌಕರರ ಅವಲಂಬಿತರಿಗೆ ಬಿಡುಗಡೆ ಮಾಡಿ ನಿವೃತ್ತಿ ವೇತನ ಮತ್ತು ಉಪಧನ, ಅನುಕಂಪದ ಆಧಾರದ ಮೇಲೆ ನೌಕರಿ ಹಾಗೂ ಇತರೆ ಆರ್ಥಿಕ ಸೌಲಭ್ಯಗಳನ್ನು ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ವಿರುದ್ಧವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಜಂಟಿ ಆಯುಕ್ತರು, ಉಪ ಆಯುಕ್ತರು, ಮುಖ್ಯ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು, ಆರೋಗ್ಯ ಪರಿವೀಕ್ಷಕರುಗಳು ಹಾಗೂ ಪಾಲಿಕೆಯಲ್ಲಿ ಎರವಲು ಸೇವೆ ಮೇಲೆ 3 ವರ್ಷಗಳ ಮೇಲ್ಪಟ್ಟು ಕಾನೂನು ಬಾಹಿರವಾಗಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಕೂಡಲೇ ಮಾತೃ ಇಲಾಖೆಗೆ ಹಿಂದಿರುಗಿಸಬೇಕು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ 702 ವಿವಿಧ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ತುಂಬಬೇಕು ಸೇರಿದಂತೆ 17 ಬೇಡಿಕೆಗಳ ಈಡೇರಿಕೆಗೆ ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ದಾವಣಗೆರೆ ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದ ರಾಜ್, ಉಪಾಧ್ಯಕ್ಷ ಕೆ.ಸಿ. ಹಾಲೇಶ್, ಪ್ರಧಾನ ಕಾರ್ಯದರ್ಶಿ ಕೆ. ಬಸವರಾಜ್, ಖಜಾಂಚಿ ಎಸ್.ಬಿ. ಗುತ್ಯಪ್ಪ, ಎಸ್.ಕೆ. ಪಾಂಡುರಂಗ, ಗೋವಿಂದ ನಾಯ್ಕ್, ನಾಗರತ್ನಮ್ಮ, ಸುರೇಶ್ ಪಾಟೀಲ್, ಬಿ. ವಿನಾಯಕ, ಬಿ.ಹೆಚ್. ಸುನೀಲ್ ಸೇರಿದಂತೆ, ಇತರರು ಭಾಗವಹಿಸಿದ್ದರು.

# ಪಿಂಚಣಿಯಿಂದ ಪ್ಲಾಸ್ಟಿಕ್‌ವರೆಗೆ ದೂರುಗಳು

**(1ನೇ ಪುಟದಿಂದ)** ಸೂಚಿಸಿದರು.

ನಗರದ ನಿಜಲಿಂಗಪ್ಪ ಬಡಾವಣೆಯಲ್ಲಿ 15 ವರ್ಷಗಳಿಂದ ಇದ್ದ ಅಂಚೆ ಕಚೇರಿ ಶಾಖೆಯನ್ನು ಇದ್ದಕ್ಕಿದ್ದಂತೆ ಬಂದ್ ಮಾಡಲಾಗಿದೆ. ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿ ಹತ್ತು ಹಾಗೂ 11ನೇ ಕ್ರಾಸ್‌ಗಳಲ್ಲಿ ರಸ್ತೆ ಒತ್ತುವರಿ ಮಾಡಿಕೊಳ್ಳಲಾಗಿದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಸಿದ್ದಣ್ಣ ಮನವಿ ಮಾಡಿಕೊಂಡರು.

**ಅರ್ಜಿ ಸ್ವೀಕರಿಸುತ್ತಿಲ್ಲ :** ದಾವಣಗೆರೆ ತಹಶೀಲ್ದಾರ್ ಕಚೇರಿಯಲ್ಲಿ ವೃದ್ಧಾಪ್ಯ ವೇತನ, ಅಂಗವಿಕಲ ಮತ್ತು ವಿಧವಾ ವೇತನ ಅರ್ಜಿಗಳನ್ನು ತೆಗೆದುಕೊಳ್ಳದೇ ವಾಪಸ್ ಕಳುಹಿಸುತ್ತಿದ್ದಾರೆ ಎಂದು ಸಾಮಾಜಿಕ ಕಾರ್ಯಕರ್ತ ಮಲ್ಲಿಕಾರ್ಜುನ ಇಂಗಳೇಶ್ವರ ದೂರಿದರು. ತಹಶೀಲ್ದಾರ್ ಗಿರೀಶ್ ಈ ಬಗ್ಗೆ ಕ್ರಮ ತೆಗೆದುಕೊಳ್ಳುವ ಜೊತೆಗೆ, ಜನರ ಸಮಸ್ಯೆಗಳ ಬಗ್ಗೆ ಖುದ್ದು ಗಮನ ಹರಿಸಬೇಕೆಂದು ಜಿಲ್ಲಾಧಿಕಾರಿ ಬೀಳಗಿ ಸೂಚಿಸಿದರು.

**ನಿಲ್ಲದ ಪ್ಲಾಸ್ಟಿಕ್ ರಾಶಿ :** ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಮಾರಾಟ ಮತ್ತು ಬಳಕೆ ರಾಜಾರೋಷವಾಗಿ ನಡೆಯುತ್ತಿದೆ. ಕಸದ ರಾಶಿ ಜೊತೆ ಅರ್ಧದಷ್ಟು ಪ್ಲಾಸ್ಟಿಕ್ ಸೇರಿ ಚರಂಡಿಗಳು ಕಟ್ಟುತ್ತಿವೆ. ಜಿಲ್ಲೆಯಾದ್ಯಂತ ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ಪರಿಸರ ಸಂರಕ್ಷಣಾ ವೇದಿಕೆಯ ಅಧ್ಯಕ್ಷ ಗಿರೀಶ್ ಎಸ್.ದೇವರಮನೆ ಮನವಿ ಮಾಡಿಕೊಂಡರು.

**ಸ್ಮಾರ್ಟ್ ದೂರು :** ಸ್ಮಾರ್ಟ್‌ಸಿಟಿ ಲಿಮಿಟೆಡ್ ವತಿಯಿಂದ ನಗರದಲ್ಲಿ ಫೇಸ್-1 ಕಾಮಗಾರಿಯಲ್ಲಿ ಸಾಕಷ್ಟು ಅಕ್ರಮ ನಡೆಸಲಾಗಿದೆ. ಕಡಿಮೆ ಬೆಲೆಯ ಗಿಡಗಳನ್ನು ಹೆಚ್ಚಿನ ಬೆಲೆಗೆ ಟೆಂಡರ್ ಮೂಲಕ ಖರೀದಿಸಿ ಸರಿಯಾದ ನಿರ್ವಹಣೆ ಇಲ್ಲದೆ ಹಾಳಾಗಿವೆ. ಟೆಂಡರ್‌ದಾರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಸಾಮಾಜಿಕ ಕಾರ್ಯಕರ್ತ ಪ್ರಸನ್ನ ಬೆಳಕೇರಿ ಮನವಿ ಮಾಡಿದ್ದಾರೆ.

**ರಾಜಕಾಲುವೆ ಒತ್ತುವರಿ :** ಸಾಮಾಜಿಕ ಕಾರ್ಯಕರ್ತ ಹರೀಶ್ ಹಳ್ಳಿ ಅರ್ಜಿ ಸಲ್ಲಿಸಿ, ರಾಜಕಾಲುವೆ ಮತ್ತು ನೈಸರ್ಗಿಕ ಹಳ್ಳವನ್ನು ಕೆಲವರು ನಿವೇಶನ ಮಾಡಿಕೊಂಡಿದ್ದಾರೆ, ಇದು ತಿಳಿದೂ ಪಾಲಿಕೆಯವರು ಡೋರ್ ಸಂಖ್ಯೆ ನೀಡಿದ್ದು, ಇವರ ವಿರುದ್ದ ಸೂಕ್ತ ಕ್ರಮ ಕೈಗೊಳ್ಳಬೇಕೆಂದರು.

**ಅಂಗನವಾಡಿ ಒತ್ತುವರಿ :** ಜಗಳೂರು ತಾಲ್ಲೂಕಿನ ಮುಸ್ಟೂರು ಗ್ರಾಮದಲ್ಲಿ ಅಂಗನವಾಡಿ ಕಟ್ಟಡಕ್ಕೆ ಸೇರಿದ ಜಾಗದಲ್ಲಿ ಮಲ್ಲಪ್ಪ ಮತ್ತು ಪ್ರದೀಪ ಎಂಬುವವರು ಮನೆದೇವರ ದೇವಸ್ಥಾನ ಕಟ್ಟಿದ್ದು, ದೇವಸ್ಥಾನ ತೆರವುಗೊಳಿಸಬೇಕೆಂದು ಗ್ರಾಮದ ನಿಂಗಪ್ಪ ಮನವಿ ನೀಡಿದರು.

**ಶಾಲೆಗೆ ಜಾಗ ಕೊಡಿ :** ಹೊನ್ನಾಳಿನ ತಾಲ್ಲೂಕಿನ ಹೊಳೆಮಾದಾಪುರದಲ್ಲಿ ಶಾಲೆಗೆಂದು ಮೀಸಲಿಡಲಾದ ಸರ್ಕಾರಿ ಜಮೀನನ್ನು ಕೆಲವರು ಖಾಸಗಿ ಕಟ್ಟಡ ಕಟ್ಟಲು ಬಳಸಿಕೊಳ್ಳಲು ಪ್ರಯತ್ನಿಸುತ್ತಿದ್ದು, ಈ ಭೂಮಿಯನ್ನು ಖಾಸಗಿಗೆ ಬಿಡದೇ ಸರ್ಕಾರಿ ಜಾಗ ಎಂದು ಇ ಸ್ವತ್ತು ಮಾಡಬೇಕು. ಜೊತೆ ಶಾಲೆಗೆ ಮೀಸಲಿಡಬೇಕೆಂದು ಗ್ರಾಮಸ್ಥರು ಮನವಿ ಮಾಡಿದರು.

**ಮದ್ಯದಂಗಡಿಗೆ ಸರ್ಕಾರಿ ಜಾಗ :** ಶಿರಮಗೊಂಡನಹಳ್ಳಿ ಮೂಲ ಸರ್ವೇ ನಂ. 56 ಪ್ರಸ್ತುತ ರಿ ಸರ್ವೇ ನಂ.133 ರಲ್ಲಿ ಸರ್ಕಾರಿ ಭೂಮಿ ಎಂದು ಪಹಣಿಯಲ್ಲಿದ್ದು, ಈ ಜಾಗವನ್ನು ಅಬಕಾರಿ ಅಧಿಕಾರಿಗಳು ಮದ್ಯದಂಗಡಿ ನಡೆಸಲು ಪರವಾನಗಿ ನೀಡಿದ್ದು, ಇದರಲ್ಲಿ ನಾಲ್ಕು ಎಕರೆ ಜಾಗ ಸರ್ಕಾರದ್ದಾಗಿದ್ದು ಇದನ್ನು ತೆರವುಗೊಳಿಸಬೇಕೆಂದು ಪವನ್‌ರಾಜ್ ಪವಾರ್ ಎಂಬುವವರು ಮನವಿ ಸಲ್ಲಿಸಿದರು.

**ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಿ :** ನಗರದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಕಾರ್ಯ ನೆನೆಗುದಿಗೆ ಬಿದ್ದಿದೆ. ಅಂಬೇಡ್ಕರ್ ವೃತ್ತದಲ್ಲಿ ಕಂಚಿನ ಪ್ರತಿಮೆ ಸ್ಥಾಪಿಸಬೇಕು. ತುರ್ತಾಗಿ ಕಾಮಗಾರಿ ಪ್ರಾರಂಭಿಸಲು ಕ್ರಮಕೈಗೊಳ್ಳಬೇಕೆಂದು ಕರ್ನಾಟಕ ದಲಿತ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಸಿ. ಬಸವರಾಜ್ ಮನವಿ ಮಾಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ, ಎಸಿ ಮಮತಾ ಹೊಸಗೌಡರ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ದೂಡಾ ಆಯುಕ್ತ ಬಿ.ಟಿ.ಕುಮಾರಸ್ವಾಮಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ನಜ್ಮಾ ಡಿಹೆಚ್‌ಓ ಡಾ.ನಾಗರಾಜ್, ಸ್ಮಾರ್ಟ್‌ಸಿಟಿ ಎಂಡಿ ರವೀಂದ್ರ ಮಲ್ಲಾಪುರ, ಎಸ್‌ಎಲ್‌ಓ ರೇಷ್ಮಾ ಹಾನಗಲ್, ಎಸಿ ಪ್ರೊಬೇಷನರ್ ದುರ್ಗಾಶ್ರೀ, ತಹಶೀಲ್ದಾರ್ ಗಿರೀಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಡಿಡಿ ವಿಜಯಕುಮಾರ್, ಸಮಾಜ ಕಲ್ಯಾಣ ಇಲಾಖೆ ಡಿಡಿ ಕೌಸರ್ ರೇಷ್ಮಾ ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

### ಜನಸ್ಪಂದನೆಗೆ ಬಂದ ಮಾಜಿ ಶಾಸಕ

ಹೊನ್ನಾಳಿ ತಾಲ್ಲೂಕಿನ ಬೆನಕನಹಳ್ಳಿ ಗ್ರಾಮದ ಸರ್ವೇ ನಂ.79 ಕ್ಕೆ ಸಂಬಂಧಿಸಿದ ಭೂಮಿ ವಿವಾದದ ಕುರಿತ ಅರ್ಜಿ ಸಲ್ಲಿಸಿದ ಅರ್ಜಿದಾರರು ತಮ್ಮ ಜಮೀನಿಗೆ ಸಂಬಂಧಿಸಿದಂತೆ ನ್ಯಾಯ ಒದಿಗಸಬೇಕು ಎಂದು ಮನವಿ ಮಾಡಿದರು. ಜೊತೆಗೆ ಹೊನ್ನಾಳಿ ಮಾಜಿ ಶಾಸಕರಾದ ಶಾಂತನಗೌಡರು, ಈ ಜಮೀನು ವಿವಾದದ ಕುರಿತು ಎರಡೂ ಪಕ್ಷಗಾರರನ್ನು ತಹಶೀಲ್ದಾರ್ ಮತ್ತು ಎಸಿ ಸಮ್ಮುಖದಲ್ಲಿ ಕರೆಯಿಸಿ ವಾಸ್ತವಾಂಶ ತಿಳಿದು ಆ ಜಮೀನು ವಾಸ್ತವವಾಗಿ ಯಾರಿಗೆ ಸೇರಬೇಕೋ ಅವರಿಗೆ ಮಾಡಿಕೊಡುವಂತೆ ಕೋರಿದರು.


ಅರ್ಜಿ ಸ್ವೀಕರಿಸಿದ ಜಿಲ್ಲಾಧಿಕಾರಿಗಳು ಎಸಿ ಮತ್ತು ತಹಶೀಲ್ದಾರರು ಜಂಟಿಯಾಗಿ ಸ್ಥಳ ಪರಿಶೀಲಿಸಲು ಹಾಗೂ ಎರಡೂ ಪಕ್ಷಗಾರರೊಂದಿಗೆ ಚರ್ಚಿಸಲು ಸೂಚನೆ ನೀಡಿದ್ದೇನೆ ಎಂದರು.

### ಅರ್ಧ ಶತಕ ದಾಟಿದ ಮನವಿಗಳು

ಒಂದು ವರ್ಷಕ್ಕೂ ಅಧಿಕ ಸಮಯದಿಂದ ಸ್ಥಗಿತಗೊಂಡಿದ್ದ ಜನಸ್ಪಂದನ ಗುರುವಾರ ಪುನರಾರಂಭಗೊಂಡಾಗ 50ಕ್ಕೂ ಹೆಚ್ಚು ಜನರು ಮನವಿಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ್ದಾರೆ. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಮಧ್ಯಾಹ್ನ 12.30ರವರೆಗೂ ಅರ್ಜಿಗಳನ್ನು ಸ್ವೀಕರಿಸಿ ಜನರ ಅಹವಾಲು ಆಲಿಸಿದರು.

ಅಧಿಕಾರಿಗಳು ತಮ್ಮ ತಮ್ಮ ಕಚೇರಿಗಳಲ್ಲಿ ಕೆಲಸ ಮಾಡಿಕೊಟ್ಟಲ್ಲಿ ಇಷ್ಟು ಅರ್ಜಿಗಳು ಜಿಲ್ಲಾಡಳಿತಕ್ಕೆ ಬರುವುದಿಲ್ಲ. ಆದ ಕಾರಣ ಇನ್ನು ಮುಂದೆ ಅಧಿಕಾರಿಗಳು ತಮ್ಮ ಹಂತದಲ್ಲಿ ಶೀಘ್ರವಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದವರು ಇದೇ ಸಂದರ್ಭದಲ್ಲಿ ಸೂಚಿಸಿದರು.

## ದೇವನಗರಿಯ ರೋಹಿಣಿ ಐಆರ್‌ಎಸ್ ಯುವಪಡೆಗೆ ಸ್ಫೂರ್ತಿಯ ಸೆಲೆ



ದೂರದ ಊರಲ್ಲಿ ಅಚಾನಕ್ ಆಗಿ ನಮ್ಮೂರಿನ ಜನರು ಭೇಟಿಯಾದರೆ ಆಗುವ ಸಂತೋಷ ಅಪಾರ. ಅದರಲ್ಲೂ ತಮ್ಮ ಖಡಕ್ ವೃತ್ತಿ ಜೀವನದಲ್ಲಿ ಹಲವು ಯಶಸ್ವೀ ಕಾರ್ಯಾಚರಣೆಗಳ ಮೂಲಕ ಮನೆಮಾತಾಗಿರುವ ತವರೂರಿನ ಸಾಧಕರೊಬ್ಬರನ್ನು ಎದುರುಗೊಳ್ಳುವ ಸಂತೋಷಕ್ಕೆ ಪಾರವೇ ಇಲ್ಲ ಎನ್ನಬಹುದು.

ಅದು ಆಗಿದ್ದು ಇತ್ತೀಚೆಗಷ್ಟೇ. ಮೂಲತಃ ದಾವಣಗೆರೆಯವಳಾದ ನನಗೆ, ಮದ್ರಾಸ್ ವಿವಿ ಸಮಾರಂಭದಲ್ಲಿ ದಾವಣಗೆರೆಯವರಾದ ರೋಹಿಣಿ ದಿವಾಕರ್ ಐಆರ್‌ಎಸ್ ಅವರನ್ನು ವೈಯಕ್ತಿಕವಾಗಿ ಭೇಟಿಯಾಗಿ ಮಾತನಾಡುವ ಸುಯೋಗ ಒದಗಿಬಂತು. ನಾನು ಮೂಲತಃ ದಾವಣಗೆರೆಯವಳಾದರೂ ಜೀವನದ ಅವಕಾಶಗಳು ಮತ್ತು ಆಯ್ಕೆಗಳು ನನ್ನನ್ನು ಚೆನ್ನೈಗೆ ಕರೆತಂದವು. ಇಲ್ಲಿನ ಎಸ್‌ಜಿಪಿಸಿ ಕಾಲೇಜಿನಲ್ಲಿ ಮಾನವ ವಿಜ್ಞಾನಗಳ ಪ್ರಾಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದೇನೆ.

ಕಳೆದ ವಾರ ಮಹಿಳಾ ಸಬಲೀಕರಣ ಮತ್ತು ಅದರ ಭವಿಷ್ಯದ ಕುರಿತು ಮದ್ರಾಸ್ ವಿಶ್ವವಿದ್ಯಾಲಯವು ಆಯೋಜಿಸಿದ್ದ ಸಮಾರಂಭದಲ್ಲಿ ಭಾಗವಹಿಸಿದ್ದೆ. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರೋಹಿಣಿ ದಿವಾಕರ್ ಐಆರ್‌ಎಸ್ ಅವರನ್ನು ನೋಡಿ ನನಗೆ ಹೆಮ್ಮೆಯಿಂದ ಎದೆ ತುಂಬಿ ಬಂತು. ಅವರು ನಮ್ಮೂರಿನ ರೂಪಾ ಐಪಿಎಸ್ ಅವರ ಸಹೋದರಿ ಎಂದು ನನಗೆ ತಿಳಿದಿದ್ದರೂ, ವೈಯಕ್ತಿಕವಾಗಿ ಅವರನ್ನು ಭೇಟಿಯಾಗುವುದು ಮತ್ತು ಮಾತನಾಡುವುದು ಒಂದು ಸಂತೋಷಕರ ಅನುಭವ ಎನಿಸಿತು.

ಮೊದಲ ಭೇಟಿಯಲ್ಲಿಯೇ ಅವರ ವಿನಮ್ರತೆಯಿಂದ ನಾನು ವಿಸ್ಮಯಗೊಂಡೆ. ದಾವಣಗೆರೆಯ ಈ ಪ್ರತಿಭೆ ತನ್ನ ಬೇರುಗಳ ಧ್ವಜವನ್ನು ಮತ್ತೊಂದು ಪ್ರದೇಶದಲ್ಲಿ ಹೊಸ ಎತ್ತರಕ್ಕೆ ಕೊಂಡೊಯ್ಯುವುದನ್ನು ನೋಡಿ ನನಗೆ ಹೆಮ್ಮೆ ಅನಿಸಿತು. ತನ್ನ ಅಕ್ಕನಂತೆ, ಅವರು ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿ ಎಂಬ ಹೆಸರನ್ನು ಪಡೆದಿದ್ದಾರೆ ಎನ್ನುವುದು ಮತ್ತೂ ಖುಷಿಕೊಡುವ ವಿಷಯವಾಗಿತ್ತು.

ಅಂದು ರೋಹಿಣಿ ಅವರು ಮಾಡಿದ ಭಾಷಣ ಯುವಕರಿಗೆ ಮತ್ತು ಅಲ್ಲಿ ನೆರೆದಿದ್ದ ವಿದ್ಯಾರ್ಥಿಗಳಿಗೆ ತುಂಬಾ ಸ್ಫೂರ್ತಿದಾಯಕ ಮತ್ತು ಪ್ರೇರಣೆ ನೀಡಿತು. ಅವರ ಪ್ರೊಫೈಲ್ ಓದಿದ ನಂತರ ರೋಹಿಣಿಯವರ ವೃತ್ತಿಪರ ಸಾಧನೆಗಳ ಬಗ್ಗೆ ನನಗೆ ಹೆಚ್ಚು ತಿಳಿಯಿತು. ಇದು ನಿಜವಾಗಿಯೂ ನನಗೆ ಸ್ಫೂರ್ತಿದಾಯಕವಾಗಿತ್ತು. ರೂಪ-ರೋಹಿಣಿ ಅಂತಹ ಸಾಧಕಿಯರ ಯಶೋಗಾಥೆ ನಮ್ಮೂರಿನ ಯುವಜನತೆಗೆ ಸ್ಫೂರ್ತಿ ನೀಡಿ ಅವರಂತೆ ಸಾಧಕರಾಗಿ ಹೊರ ಹೊಮ್ಮಲಿ ಎಂಬ ಆಶಯ ಈ ಬರವಣಿಗೆಗೆ ನಾಂದಿ ಹಾಡಿತು.

ರೋಹಿಣಿ ಅವರು ಬೆಂಗಳೂರಿನಲ್ಲಿ ಡೆಪ್ಯೂಟಿ ಕಮೀಷನರ್ ಆಫ್ ಇನ್‌ಕಂ ಟ್ಯಾಕ್ಸ್ ಆಗಿದ್ದ ಸಂದರ್ಭದಲ್ಲಿ, ಪ್ರಸಿದ್ಧ ಕನ್ನಡ ಚಲನಚಿತ್ರ ಸಂಗೀತ ನಿರ್ದೇಶಕರ ಮೇಲೆ ಆದಾಯ ತೆರಿಗೆ ದಾಳಿ ಮಾಡಿದ್ದು, ಚಿತ್ರರಂಗದಲ್ಲಿ ಹೆಚ್ಚು ಸಂಚಲನ ಮೂಡಿಸಿತು. ಅದೇ ವರ್ಷದಲ್ಲಿ ರೋಹಿಣಿ ತೆರಿಗೆ ಡಿಫಾಲ್ಟ್ ಮಾಡಿದ ರಾಜಕೀಯ ಬಿಗ್‌ವಿಗ್ ಒಡೆತನ ಪ್ರಸಿದ್ಧ ಮಾಧ್ಯಮ ವಾಹಿನಿಯೊಂದರ ಬ್ಯಾಂಕ್ ಖಾತೆಗಳನ್ನು ಫ್ರೀಜ್ ಮಾಡಿದರು. ಮೀಡಿಯಾ ಹೌಸ್ ತಕ್ಷಣ ತೆರಿಗೆಗಳನ್ನು ಪಾವತಿಸಿತು. ಈ ಎರಡೂ ಕಾರ್ಯಾಚರಣೆಗಳಿಂದ ಆ ವರ್ಷದಲ್ಲಿ ಚಿತ್ರರಂಗ ಹಾಗೂ ಮಾಧ್ಯಮ ರಂಗದ ಆದಾಯ ತೆರಿಗೆ ಸಂಗ್ರಹ ಎಲ್ಲಾ ಸಮಯಕ್ಕಿಂತ ಹೆಚ್ಚಾಗಿತ್ತು. ಇದು ಅವರ ದಿಟ್ಟ ಹೆಜ್ಜೆಗೆ ನಿದರ್ಶನವಾಗಿದೆ.

ಗಣಿಗಾರಿಕೆ (Mining Scam) ಹಗರಣ ಪ್ರಕರಣದಲ್ಲಿ, ರೋಹಿಣಿ ಸುಮಾರು 700 ಕೋಟಿ ಕಪ್ಪು ಹಣವನ್ನು ಬಯಲಿಗೆಳೆದಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ರೋಹಿಣಿ ಅವರ ಆದೇಶಗಳ ಮೇಲ್ಮನವಿಯನ್ನು ಕೋರ್ಟ್‌ಗಳು ಎತ್ತಿ ಹಿಡಿದಿವೆ. ರೋಹಿಣಿ ಈಗ ಚೆನ್ನೈನಲ್ಲಿ ಪ್ರಾದೇಶಿಕ ಆರ್ಥಿಕ ಗುಪ್ತಚರ ಮಂಡಳಿಯ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ. ಈ ಮಂಡಳಿ ಭಾರತದ ಹಣಕಾಸು ಸಚಿವರಿಗೆ ವರದಿ ಮಾಡುತ್ತದೆ. ಮತ್ತು ಕಪ್ಪು ಹಣದ ಬಗ್ಗೆ ನಿರ್ಣಾಯಕ ಕಾರ್ಯಾಚರಣೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಇದಲ್ಲದೆ ಇಂಡಿಯನ್ ಎಕ್ಸ್‌ಪ್ರೆಸ್‌ಗಾಗಿ ನಿಯಮಿತವಾಗಿ ಬರೆಯುತ್ತಿರುತ್ತಾರೆ. ಮತ್ತು ಲೇಖಕರಾಗಿಯೂ ಮೆಚ್ಚುಗೆ ಪಡೆದಿರುತ್ತಾರೆ. ಬಹುಮುಖ ಪ್ರತಿಭೆಯ ರೋಹಿಣಿ ಅವರು ಹೀಗೆ ಯಶಸ್ಸಿನ ಉತ್ತುಂಗಕ್ಕೆ ಏರಲಿ. ನಮ್ಮೂರಿನ ಕೀರ್ತಿ ಪತಾಕೆಯನ್ನು ಎಲ್ಲೆಡೆ ಹಾರಿಸಲಿ ಎಂದು ಹಾರೈಸೋಣ.

- ಲಕ್ಷ್ಮಿ ಮಲ್ಲಿಕಾರ್ಜುನ್, ಚೆನ್ನೈ.
laxmimallikarjun077@gmail.com

## ಚಿತ್ರಗಳ ಪ್ರದರ್ಶನ ತಡೆ ಎಚ್ಚರಿಕೆ

**(1ನೇ ಪುಟದಿಂದ)** ಹಾಗೂ ಅಕ್ಷಯ್ ಕುಮಾರ್ ಅವರು ಈ ಹಿಂದೆ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಇದ್ದಾಗ ಇಂಧನ ಬೆಲೆ ಏರಿಕೆ ಟೀಕಿಸಿದ್ದರು ಎಂದು ನೆನಪಿಸಿದ್ದಾರೆ.

ನಾವು ಮಹಾರಾಷ್ಟ್ರದಲ್ಲಿ ಅಮಿತಾಬ್ ಬಚ್ಚನ್ ಹಾಗೂ ಅಕ್ಷಯ್ ಕುಮಾರ್ ಚಿತ್ರಗಳ ಚಿತ್ರೀಕರಣ ಹಾಗೂ ಪ್ರದರ್ಶನಕ್ಕೆ ಅವಕಾಶ ನೀಡುವುದಿಲ್ಲ. ತಾರೆಗಳು ದೇಶದ ಜನರಿಗೆ ಉತ್ತರಿಸಬೇಕು, ಅವರು ಪಕ್ಷಪಾತಿ ನಿಲುವು ತಳೆಯಬಾರದು. ಅವರು ಮನಮೋಹನ್ ಸಿಂಗ್ ಪ್ರಧಾನ ಮಂತ್ರಿಯಾಗಿದ್ದಾಗ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ವಿರೋಧಿಸಿದ್ದರೆ, ಈಗ ಯಾಕೆ ಟ್ವೀಟ್ ಮಾಡಬಾರದು? ಅವರು ಈ ಬಗ್ಗೆ ಮಾತನಾಡಬೇಕು ಎಂದು ತಿಳಿಸಿದ್ದಾರೆ.

ಈ ರೀತಿ ಬೆದರಿಕೆ ಹಾಕುವುದು ಪ್ರಜಾಪ್ರಭುತ್ವವೇ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಪಕ್ಷಪಾತಿ ನಿಲುವನ್ನು ಸಹಿಸಲಾಗದು ಎಂದಿದ್ದಾರೆ. ಪಟೋಲೆಗೆ ಬೆಂಬಲಿಸಿರುವ ಎನ್.ಸಿ.ಪಿ. ನಾಯಕ ಹಾಗೂ ರಾಜ್ಯ ಸಚಿವ ಜಿತೇಂದ್ರ ಅವಹಡ್, ರಿಹಾನಾ ಏನಾದರೂ ಮಾತನಾಡಿದರೆ, ನಾವು ಒಪ್ಪುವುದಿಲ್ಲ. ಆದರೆ, ಅಕ್ಷಯ್ ಕುಮಾರ್ ಏನಾದರೂ ಹೇಳಿದರೆ ಒಪ್ಪುತ್ತೇವೆ. ಅದೇಕೆ? ಅವರು ಕೆನಡಾದ ನಾಗರಿಕ ಹಾಗೂ ಅತಿ ಹೆಚ್ಚು ಆದಾಯ ಪಡೆಯುವ ನಟ. ಅವರು ಕೆನಡಾಗೆ ಹಣ ತೆಗೆದುಕೊಂಡು ಹೋಗುತ್ತಾರೆ. ಕೆನಡಾದ ನಾಗರಿಕನಿಗೆ ಭಾರತದ ಆಂತರಿಕ ವ್ಯವಹಾರಗಳ ಬಗ್ಗೆ ಮಾತನಾಡಲು ಏನು ಹಕ್ಕಿದೆ? ಎಂದವರು ಪ್ರಶ್ನಿಸಿದ್ದಾರೆ.

ಈ ನಡುವೆ, ನಾನಾ ಪಟೋಲೆ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ, ಅವರ ವಿರುದ್ಧ ಗೃಹ ಸಚಿವ ಅನಿಲ್ ದೇಶಮುಖ್ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದೆ. ಭಾರತ ಮಾತೆಗೆ ಬೆಂಬಲಿಸಿದವರ ವಿರುದ್ಧ ಕಾಂಗ್ರೆಸ್ ಬಹಿರಂಗ ಬೆದರಿಕೆ ಹಾಕಿತ್ತು. ದೇಶ ಇಂಥದ್ದನ್ನು ಸಹಿಸುವುದಿಲ್ಲ. ಅವರು ಅಮಿತಾಭ್ ಬಚ್ಚನ್ ಹಾಗೂ ಅಕ್ಷಯ್ ಕುಮಾರ್ ಅವರಂತಹ ನಟರನ್ನು ಬಹಿರಂಗವಾಗಿ ಬೆದರಿಸಲು ಹೇಗೆ ಸಾಧ್ಯ? ಇದು ಪ್ರಜಾಪ್ರಭುತ್ವ ಎಂದು ಬಿಜೆಪಿ ಶಾಸಕ ರಾಮ್ ಕದಮ್ ಪ್ರಶ್ನಿಸಿದ್ದಾರೆ.

## ಹರಿಹರ : ಪುರಂದರದಾಸರ, ತ್ಯಾಗರಾಜರ ಆರಾಧನೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ಚೈತನ್ಯ ಸಂಗೀತ ಮತ್ತು ನೃತ್ಯ ಕಲಾ ಕೇಂದ್ರ ಮತ್ತು ಶ್ರೀ ಸತ್ಯಗಣಪತಿ ದೇವಸ್ಥಾನ, ಚಿಂತಾಮಣಿ ನಗರ (ಹರಿಹರ) ಇವರುಗಳ ಸಹಯೋಗದಲ್ಲಿ ಶ್ರೀ ಪುರಂದರ ದಾಸರು ಮತ್ತು ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವ ಕಾರ್ಯಕ್ರಮವನ್ನು ಇಂದು ಮಧ್ಯಾಹ್ನ 2.30 ಕ್ಕೆ ನಗರದ ಚಿಂತಾಮಣಿ ನಗರದಲ್ಲಿರುವ ಶ್ರೀ ಸತ್ಯಗಣಪತಿ ದೇವಸ್ಥಾನದಲ್ಲಿ ಏರ್ಪಡಿಸಲಾಗಿದೆ.

ವಿದ್ವಾನ್ ದ್ವಾರಕೀಶ್ ಎಂ. ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ರವಿಚಂದ್ರ, ಎಂ.ಆರ್. ಸತ್ಯನಾರಾಯಣ್ ಆಗಮಿಸುವರು. ಕಾರ್ಯಕ್ರಮದಲ್ಲಿ ನಾದಸ್ವರವನ್ನು ಬಿ.ಕೆ. ರುದ್ರೇಶ್ ಮತ್ತು ತಂಡದವರು (ದಾವಣಗೆರೆ), ಭರತನಾಟ್ಯವನ್ನು ಕು. ವೈಷ್ಣವಿ ಯು (ಹರಿಹರ) ಇವರಿಂದ ನಡೆಯುವುದು.

## ಲಸಿಕೆ ಪಡೆಯದಿದ್ದರೆ ಸರ್ಕಾರಿ ಸೌಲಭ್ಯದ ಕಡಿತವಿಲ್ಲ : ಜಿಲ್ಲಾಧಿಕಾರಿ

**(1ನೇ ಪುಟದಿಂದ)** ಮೊದಲ ಹಾಗೂ ಎರಡನೇ ಹಂತದ ಫಲಾನುಭವಿಗಳಿಗೆ ಸರ್ಕಾರದಿಂದ ಯಾವುದೇ ಸೌಲಭ್ಯ ನೀಡುವುದಿಲ್ಲ ಎಂಬ ಎಚ್ಚರಿಕೆ ನೀಡಿದ್ದಾರೆ ಎಂದು ಜಿಲ್ಲಾಧಿಕಾರಿ ಬೀಳಗಿ ನಿನ್ನೆ ಹೇಳಿದ್ದರು.

ಈ ಕುರಿತು ಪತ್ರಕರ್ತರೊಂದಿಗೆ ಮಾತನಾಡುತ್ತಾ ಸ್ಪಷ್ಟನೆ ನೀಡಿರುವ ಅವರು, ಲಸಿಕೆ ಪಡೆಯದವರಿಗೆ ಸರ್ಕಾರಿ ಸೌಲಭ್ಯಗಳನ್ನು ಕಡಿತಗೊಳಿಸುವುದಿಲ್ಲ ಎಂದಿದ್ದಾರೆ.

ಆದರೆ, ಈ ಹಿಂದೆ ಕೊರೊನಾ ಸೋಂಕಿಗೆ ಒಳಗಾದಾಗ ಸರ್ಕಾರದಿಂದ ಚಿಕಿತ್ಸಾ ಸೌಲಭ್ಯ ಕಲ್ಪಿಸಲಾಗಿತ್ತು. ಲಸಿಕೆ ಪಡೆಯದೇ ಇದ್ದರೆ ಸೋಂಕು ಬರುವ ಸಾಧ್ಯತೆ ಇರುತ್ತದೆ. ಮತ್ತೆ ಕೊರೊನಾ ಸೋಂಕು ಬಂದಾಗ ಹಿಂದಿನ ರೀತಿಯಲ್ಲಿ ಸರ್ಕಾರದಿಂದ ಉಚಿತ ಚಿಕಿತ್ಸಾ ಸೌಲಭ್ಯ ಲಭ್ಯವಾಗದೇ ಇರಬಹುದು ಎಂದು ಡಾ. ತ್ರಿಲೋಕಚಂದ್ರ ಅಭಿಪ್ರಾಯ ತಿಳಿಸಿದ್ದಾರೆ ಎಂದು ಬೀಳಗಿ ಹೇಳಿದ್ದಾರೆ.

ಜಿಲ್ಲೆಯಲ್ಲಿ ಮೊದಲ ಹಂತದಲ್ಲಿ ಆರೋಗ್ಯ ಕ್ಷೇತ್ರದವರಿಗೆ ನೀಡಲಾದ ಕೋವಿಡ್ ಲಸಿಕೆ ಕಾರ್ಯಕ್ರಮದಲ್ಲಿ ಜಿಲ್ಲೆಯಲ್ಲಿ 18920 ಫಲಾನುಭವಿಗಳಿಗೆ ಲಸಿಕೆ ನೀಡುವ ಗುರಿ ಬದಲಿಗೆ ಈವರೆಗೆ 9979 ಜನರು ಲಸಿಕೆ ಹಾಕಿಸಿಕೊಂಡಿದ್ದು, ಶೇ. 52.7 ಸಾಧನೆಯಾಗಿದೆ.

ಎರಡನೆ ಹಂತದಲ್ಲಿ ಪೊಲೀಸ್, ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ ಅಧಿಕಾರಿ, ಸಿಬ್ಬಂದಿಗಳಿಗೆ ಮುಂಚೂಣಿ ಕಾರ್ಯಕರ್ತರೆಂದು ಪರಿಗಣಿಸಿ ಅವರಿಗೆ ಕೋವಿಡ್ ಲಸಿಕೆ ನೀಡಲು ಸರ್ಕಾರ ನಿರ್ಧರಿಸಿತ್ತು. ಇವರೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ಪಡೆದಿಲ್ಲ.

**ಲಸಿಕೆ ತೆಗೆದುಕೊಳ್ಳಲು ಮನವಿ :** ಕೋವಿಡ್ ಲಸಿಕೆಯಿಂದ ಯಾವುದೇ ತೊಂದರೆ ಇಲ್ಲ. ಅದಕ್ಕೆ ನಾನು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಆರೋಗ್ಯಾಧಿಕಾರಿ ಇತರೆ ಅಧಿಕಾರಿಗಳೇ ಉದಾಹರಣೆ. ನಾವು ಲಸಿಕೆ ಪಡೆದಿದ್ದು, ಏನೂ ಅಡ್ಡ ಪರಿಣಾಮ ಆಗಿಲ್ಲ ಎಂದು ಜಿಲ್ಲಾಧಿಕಾರಿ ಬೀಳಗಿ ತಿಳಿಸಿದ್ದಾರೆ.

ಆದರೆ ಆರೋಗ್ಯ ಮತ್ತು ಮುಂಚೂಣಿ ಕಾರ್ಯಕರ್ತರು ಲಸಿಕೆ ಪಡೆಯಲು ಮುಂದೆ ಬರುತ್ತಿಲ್ಲ. ಯಾರೂ ಹಿಂಜರಿಯದೇ ಲಸಿಕೆ ಪಡೆಯಬೇಕು ಎಂದು ಜಿಲ್ಲಾಧಿಕಾರಿ ಮನವಿ ಮಾಡಿಕೊಂಡಿದ್ದಾರೆ.

**ಮಾರ್ಗಸೂಚಿಯಂತೆ ಪುನರ್‌ವಿಂಗಡಣೆ :** ಜಿಲ್ಲಾ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳ ಪುನರ್‌ವಿಂಗಡಣೆ ಸರ್ಕಾರದ ಮಾರ್ಗಸೂಚಿ ಅನ್ವಯವೇ ನಡೆಯುತ್ತಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದ್ದಾರೆ.

ಕ್ಷೇತ್ರ ಪುನರ್‌ವಿಂಗಡಣೆ ಕುರಿತು ಕೆಲ ಜನಪ್ರತಿನಿಧಿಗಳು ಆಕ್ಷೇಪ ವ್ಯಕ್ತಪಡಿಸಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಜಿಲ್ಲಾಧಿಕಾರಿ, 2011ರ ಜನಗಣತಿ ಹಾಗೂ 2015ರ ಮಾರ್ಗಸೂಚಿಗಳ ಅನ್ವಯ ಕ್ಷೇತ್ರಗಳ ಪುನರ್‌ವಿಂಗಡಣೆ ನಡೆಯುತ್ತಿದೆ. ಮಾರ್ಗದರ್ಶಿ ಸೂತ್ರ ಬಿಟ್ಟು ಕ್ಷೇತ್ರ ಪುನರ್‌ವಿಂಗಡಣೆ ಮಾಡಲು ಅವಕಾಶವಿಲ್ಲ ಎಂದು ತಿಳಿಸಿದ್ದಾರೆ.

## ಧಾನ್ಯ ಸಂಗ್ರಹಕ್ಕೆ ಅವಕಾಶ

**(1ನೇ ಪುಟದಿಂದ)** ಗಣಕೀಕರಣ ವ್ಯವಸ್ಥೆ ಆಗಿದ್ದು, ಆನ್ ಲೈನ್ ವ್ಯವಸ್ಥೆ ಸಹ ಇರಲಿದೆ. ಇದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಸಹಕಾರ ಸಚಿವರು ತಿಳಿಸಿದರು.

ರೈತರಿಂದ ಭತ್ತ, ರಾಗಿ, ಬಿಳಿ ಜೋಳ, ತೊಗರಿ, ಕಡಲೆ, ಹೆಸರು, ಉದ್ದು ಸೇರಿದಂತೆ ಮೊದಲಾದ ಉತ್ಪನ್ನಗಳನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿಸಲಾಗುತ್ತಿದ್ದು ಇವುಗಳನ್ನು ರಾಜ್ಯ ಉಗ್ರಾಣಗಳ ಗೋದಾಮುಗಳಲ್ಲಿ ದಾಸ್ತಾನು ಮಾಡಲಾಗುತ್ತಿದೆ ಎಂದು ತಿಳಿಸಿದರು.

## ಸಂಚಾರದ ಮೇಲೆ ಪರಿಣಾಮವಾಗಿಲ್ಲ ಎಂದ ಸಚಿವಾಲಯ

**(1ನೇ ಪುಟದಿಂದ)** ಭಾರೀ ಸ್ಪಂದನೆ ದೊರೆತಿದೆ ಎಂದು ಆಲ್ ಇಂಡಿಯಾ ಕಿಸಾನ್ ಸಭಾ ಹೇಳಿಕೊಂಡಿದ್ದು, ಈ ರೈಲು ತಡೆ ಹೋರಾಟದ ಬೃಹತ್ ಯಶಸ್ಸು ಮೋದಿ ಸರ್ಕಾರಕ್ಕೆ ಎಚ್ಚರಿಕೆ ಎಂದು ಹೇಳಿದೆ. ಯಾವುದೇ ಅಹಿತಕರ ಘಟನೆ ಇಲ್ಲದೇ ಹೋರಾಟ ಅಂತ್ಯವಾಗಿದೆ ಎಂದು ಹೇಳಿರುವ ರೈಲ್ವೆ ವಕ್ತಾರರು, ಹೋರಾಟದಿಂದ ದೇಶಾದ್ಯಂತ ಅತಿ ಕಡಿಮೆ ಪರಿಣಾಮವಾಗಿದೆ. ಬಹುತೇಕ ರೈಲ್ವೆ ವಲಯಗಳಲ್ಲಿ ಒಂದು ರೈಲು ತಡೆಯೂ ನಡೆದಿಲ್ಲ ಎಂದು ತಿಳಿಸಿದೆ. ಪ್ರತಿಭಟನೆಯ ಕಾರಣದಿಂದಾಗಿ ರೈಲ್ವೆ 25 ರೈಲುಗಳ ಸಂಚಾರದ ವೇಳಾಪಟ್ಟಿ ಬದಲಿಸಿತ್ತು.

## ಮಾ.8 ರಂದು ಬಜೆಟ್ ಮಂಡನೆ

**(1ನೇ ಪುಟದಿಂದ)** ಗಮನಕ್ಕೆ ಬಂದಿದೆ. ಈ ಕುರಿತು ವಿಸ್ತೃತವಾಗಿ ಚರ್ಚೆಯ ಅಗತ್ಯವಿದೆ. ಈ ಬಗ್ಗೆ ಹೆಚ್ಚಿನ ಅಧ್ಯಯನಕ್ಕೆ ಕಾಲಾವಕಾಶ ಬೇಕು. ಹೀಗಾಗಿ ಮುಂದಿನ ದಿನಗಳಲ್ಲಿ ಈ ಕುರಿತು ತಜ್ಞರ ಜೊತೆ ಸಮಾಲೋಚನೆ ನಡೆಸಿ ರಾಜ್ಯ ಸರ್ಕಾರ ಅಂತಿಮ ನಿರ್ಧಾರಕ್ಕೆ ಬರಲಿದೆ ಎಂದವರು ತಿಳಿಸಿದ್ದಾರೆ.

ಚಾಮರಾಜನಗರದಲ್ಲಿ ಮೆಡಿಕಲ್ ಕಾಲೇಜು ನಿರ್ಮಾಣಕ್ಕೆ 31.92 ಕೋಟಿ ಹಣ ಮಂಜೂರು ಮಾಡಲೂ ಸಹ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಸಂಪುಟದಲ್ಲಿ ತೆಗೆದುಕೊಳ್ಳಲಾದ ಇತರೆ ಪ್ರಮುಖ ನಿರ್ಧಾರಗಳೆಂದರೆ, ಕರ್ನಾಟಕ ಡಿಸ್ಟ್ರಿಬ್ಯೂಷನ್ ಕಾಯ್ದೆಗೆ ಅನುಮೋದನೆ, ಕರ್ನಾಟಕ ಡಿಸ್ಪ್ಯೂಟ್ ರೆಸ್ಯುಲುಷನ್ ಕಾಯ್ದೆಗೆ ಅನುಮೋದನೆ, ರಸ್ತೆ ನಿರ್ಮಾಣಕ್ಕೆ ಕೆ.ಆರ್.ಡಿ.ಸಿ.ಎಲ್.ಗೆ 350 ಕೋಟಿ ಹಣ ಮಂಜೂರು , 1358 ಕೋಟಿ ರೂ. ರೂ. ವೆಚ್ಚದಲ್ಲಿ 8 ಬೃಹತ್ ವಸತಿ ಯೋಜನೆಗಳಿಗೆ ಅನುಮೋದನೆ, ಕೈಗಾರಿಕೆ ಇಲಾಖೆಗೆ ಜಮೀನು ನೀಡುವ ರೈತರಿಗೆ ಪ್ರೋತ್ಸಾಹ ಹಾಗೂ ಜಮೀನು ನೀಡುವ ರೈತರಿಗೆ ನಿಗದಿಪಡಿಸಲಾಗಿದ್ದ ಪರಿಹಾರ ಮೊತ್ತದಲ್ಲಿ ಹೆಚ್ಚಳ.

**ಸೈಟ್‌ಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 ದಕ್ಷಿಣ 120 ಅಡಿ ರಸ್ತೆಗೆ, ಶಿವ ಪಾರ್ವತಿ ಬಡಾವಣೆಯಲ್ಲಿ 50x100 ಪೂರ್ವ ದಿಕ್ಕು
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ (1/2%) ಅರ್ಧ ಪರ್ಸೆಂಟ್ ಕಮೀಷನ್‌ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ (ಏಜೆಂಟ್)
ಮೊ.98440-63409

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ, LIC ಕಾಲೋನಿಯಲ್ಲಿ, ಆಂಜನೇಯ ಬಡಾವಣೆಯಲ್ಲಿ 80x60 East, 80x60 West, 40x50 South, 30x50 North, 70x50 North East corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
ಟ್ಯಾಲಿ, ಎಂ.ಎಸ್. ಆಫೀಸ್ ಗೊತ್ತಿರುವ ಮಹಿಳೆಯರು ಹಾಗೂ ಆಫೀಸ್ ಬಾಯ್ ಬೇಕಾಗಿದ್ದಾರೆ.
99868 57728
93534 21181

**ಮನೆ ಮಾರಾಟಕ್ಕಿದೆ**
ಕುಂದುವಾಡ ಹೌಸಿಂಗ್ ಬೋರ್ಡ್ ಎರಡನೇ ಹಂತದ ತುಂಗಭದ್ರಾ ಬಡಾವಣೆಯಲ್ಲಿ ಬೋರ್‌ವೆಲ್ ಮತ್ತು ಕಾರ್ಪೋರೇಷನ್ ನೀರಿನ ಸರಬರಾಜು ವ್ಯವಸ್ಥೆಯುಳ್ಳ ಸುಸಜ್ಜಿತ ಮನೆ ಸಂಖ್ಯೆ 3267, 'ಗೌತಮ್ ನಿಲಯ'
ಆಸಕ್ತರು ಸಂಪರ್ಕಿಸಿ 94491 63356
ಅಥವಾ ಖುದ್ದಾಗಿ ಭೇಟಿ ನೀಡಿ.
ಅಳತೆ 30×50 ಮೊದಲನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ. ಮನೆ

**WANTED TEACHERS**
B.Sc., B.Ed (CBZ)-1
D.Ed.-3
M.Sc., B.Sc., B com.
ACM SCHOOL
Devaraj Urs Layout, 'C' Block, 2nd Cross, Dvg.
89703 21855, 81057 54995

**ಮನೆ/ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾನಗರದ ಪಕ್ಕ, ವಿನಾಯಕ ಬಡಾವಣೆಯಲ್ಲಿ 60x40 ಮನೆ. ವಿನಾಯಕ ಬಡಾವಣೆಯಲ್ಲಿ 40x50 ದಕ್ಷಿಣ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್‌ನಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 30x40, 30x40 West ಅಕ್ಕ-ಪಕ್ಕ, 30x50 West, 30x50 East, 40x30 East
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
ಕರುಣಾ ಜೀವ ಕಲ್ಯಾಣ ಟ್ರಸ್ಟ್‌ಗೆ ಸಮಾಜ ಸೇವೆಯಲ್ಲಿ ಆಸಕ್ತಿ ಇರುವ ಉತ್ಸಾಹಿ ಯುವಕರು ಮತ್ತು ವಿವಾಹಿತ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC / PUC
83105 20002

**ಸೈಟು ಮಾರಾಟಕ್ಕಿದೆ**
ಗ್ಲಾಸ್ ಹೌಸ್ ಪಕ್ಕದಲ್ಲಿ (ಬಲ ಭಾಗ) 30x40 ದಕ್ಷಿಣ, 30x50 ಉತ್ತರ, 40x60 ಪೂರ್ವ(40 ಅಡಿ ರಸ್ತೆಗೆ), ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ನೌಕರರಿಗೆ ಆದ್ಯತೆ.
90198 88512, 99008 37087

**ಬೇಕಾಗಿದ್ದಾರೆ**
ಕ್ಲೀನರ್, ಲೇಡಿ ಕ್ಲೀನರ್, ಬಿಲ್ಲಿಂಗ್ ಆಪರೇಟರ್, ವೆಂಡರ್ ಸಂಪರ್ಕಿಸಿ.
ಹೋಟೆಲ್ ಫುಡೀಸ್
ಚರ್ಚ್ ರೋಡ್, ದಾವಣಗೆರೆ.
98861 56688
70195 85916

**ಬೇಕಾಗಿದ್ದಾರೆ ಮನೆ ಕೆಲಸದವರು**
ನಗರದ ತ್ರಿಶೂಲ್ ಚಿತ್ರ ಮಂದಿರದ ಹತ್ತಿರ ಮನೆಯಲ್ಲಿ ಮನೆ ಕೆಲಸ ಮಾಡುವವರು ಬೆಳಿಗ್ಗೆ 6.30 ರಿಂದ 9.30ರವರೆಗೆ (3 ಘಂಟೆಗಳು ಮಾತ್ರ) ಬೇಕಾಗಿದ್ದಾರೆ. ಈ ಜಾಗಕ್ಕೆ ಹತ್ತಿರದವರು ಮಾತ್ರ ಸಂಪರ್ಕಿಸಿ.
ತಿಂಗಳಿಗೆ Rs 3500/-
98807 39392

**VS Paramedical college**
SSLC ಪಾಸ್/PUC- ಪಾಸ್ or ಫೇಲ್ ಆಗಿದ್ದೀರಾ ಚಿಂತಿಸಬೇಡಿ' course (DIPLOMA HEALTH INSPECTOR (DHI) ಕೆಲವೇ ಸೀಟುಗಳು ಮಾತ್ರ. SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್, ದಾವಣಗೆರೆ.
90195 80600
85532 78258

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95352 69849
87220 14318

**ಬೇಕಾಗಿದ್ದಾರೆ**
ದಾವಣಗೆರೆ ಹಾಗೂ ಸುತ್ತ-ಮುತ್ತ ಸೆಕ್ಯೂರಿಟಿ ಗಾರ್ಡ್, ಗನ್ ಮ್ಯಾನ್, ಸೆಕ್ಯೂರಿಟಿ ಸೂಪರ್ ವೈಸರ್ ಕೆಲಸ ಮಾಡಲು ಬೇಕಾಗಿದ್ದಾರೆ. ESI + PF ಸೌಲಭ್ಯವಿರುತ್ತದೆ. ಸಂಪರ್ಕಿಸಿ
70226 37701
72049 19232

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಹುಡುಗ ಬೇಕಾಗಿದ್ದಾನೆ. ವಿದ್ಯಾರ್ಹತೆ 6 ರಿಂದ 10ನೇ ತರಗತಿ (ಪಾಸ್/ಫೇಲ್) (ವಸತಿ ವ್ಯವಸ್ಥೆ ಇರುತ್ತದೆ)
ಸಂಪರ್ಕಿಸಿ
89516 69734

**ಬೇಕಾಗಿದ್ದಾರೆ**
ಟೈಲರಿಂಗ್-ಮಹಿಳೆಯರು, ಟೆಲಿಕಾಲರ್ - ಮಹಿಳೆಯರು, ಸೂಪರ್ ವೈಸರ್ - ಮಹಿಳೆಯರು, ಸಹಾಯಕ - ಮಹಿಳೆಯರು
ಶಶಿ ದಿನಪತ್ರಿಕೆ ಏಜೆನ್ಸಿ
ಶಾಂತಿ ಪಾರ್ಕ್ ಪಕ್ಕ
74830 88761

**TUITIONS FOR**
1st to 9th, Diploma & BE., with Notes
ಸಿಂಚನ ಅಕಾಡೆಮಿ
SBI ATM ಹತ್ತಿರ, ರಾಂ & ಕೋ. ಸರ್ಕಲ್ ದಾವಣಗೆರೆ.
85532 78258, 88614 45913

**ಮನೆ ಬಾಡಿಗೆ/ಲೀಜ್‌ಗೆ**
ಹದಡಿ ರಸ್ತೆಯಲ್ಲಿ ಬ್ಯಾಂಕ್, ಕಛೇರಿ, ಟಿ.ವಿ. ಸ್ಟೇಷನ್, ಜಿಲ್ಲಾ ಪಂಚಾಯತ್, ಹೈಟೆಕ್ ಹಾಸ್ಪಿಟಲ್, ಲಲಿತ್ ಶಾಲೆ, ಶಶಿ ಸೋಪ್ ಫ್ಯಾಕ್ಟರಿ, ಲೋಕಿಕೆರೆ ರಸ್ತೆ ಸುಬ್ರಮಣ್ಯ ದೇವಸ್ಥಾನ ಹತ್ತಿರವಿರುವ, ನೀರು 24x7, ಕಾರ್ ಪಾರ್ಕಿಂಗ್, ವಾಸ್ತುವಿರುವಂತಹ 2 BHK ಮನೆ ಬಾಡಿಗೆಗೆ/ ಲೀಜ್‌ಗೆ ಇದೆ (ಹಿಂದೂಗಳಿಗೆ) ವಿಚಾರಿಸಿ
99004 11110

**Dull in Maths**
Junior Abacus
1 std to 3 rd std
Vedic maths
4 th std to. 10 th std
Bruit abacus and vedics maths
M: 96201 53806

**Building for Rent**
on Mama's Joint on 1st Floor Prime Location is on Rent.
Contact :
98440-65638

**ಪಾಲುದಾರರು ಬೇಕಾಗಿದ್ದಾರೆ**
ಒಂದು ಸಂಸ್ಥೆಗೆ ಪಾಲುದಾರರು ಬೇಕಾಗಿದ್ದಾರೆ. ನೇರ ಸಂಪರ್ಕ
ಮೊ. 74830 88761

**PSI (CIVIL)**
545 POSTS
ಹೊಸ ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಕೋಚಿಂಗ್ ಅಕಾಡೆಮಿ
63646 40296

**ಸಾಲ ಸೌಲಭ್ಯ**
ಐ.ಟಿ.ಆರ್. ಇಲ್ಲದೆ ಮನೆ ಕಟ್ಟಲು ಸಾಲ ಸೌಲಭ್ಯ ಸಣ್ಣ ಉದ್ದಿಮೆದಾರರಿಗೆ ಮತ್ತು ಕ್ಯಾಶ್ ಸ್ಯಾಲರಿ ಕಾರ್ಮಿಕರಿಗೂ. ಡೋರ್ ನಂಬರ್ ಇಲ್ಲದಿದ್ದರೂ ಆರ್.ಸಿ.ಸಿ. ಮನೆ ಕಟ್ಟಲು, ಮನೆ ಖರೀದಿಸಲು ಸಾಲ ಸೌಲಭ್ಯ. ಹಂಚಿನ ಮನೆ, ಶೀಟಿನ ಮನೆ ಮೇಲೆ ಸಾಲ ಸೌಲಭ್ಯ. ಪರ್ಸನಲ್ ಲೋನ್, ಬಿಜಿನೆಸ್ ಲೋನ್, ಕಾರ್ ಲೋನ್‌ಗಾಗಿ
ಸಂಪರ್ಕಿಸಿ. ಮೊ:87227 11119

**ಡಿ.ಎಲ್. ಕಳೆದಿದೆ**
ಶೇಖರಪ್ಪ ಪಿ.ಹೆಚ್. ಬಿನ್ ಡಿ. ಹೊನ್ನಪ್ಪ, ಕೆ.ಟಿ.ಜೆ. ನಗರ ದಾವಣಗೆರೆ ವಾಸಿಯಾದ ನನ್ನ ಡಿ.ಎಲ್. ನಂ KA 17 20130007810 ದಿನಾಂಕ 5.02.2021 ರಂದು ಸಿ.ಜಿ. ಆಸ್ಪತ್ರೆ ಆವರಣದಲ್ಲಿ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ಯಾರಿಗಾದರೂ ಡಿ.ಎಲ್ ಸಿಕ್ಕರೆ ದಯಮಾಡಿ ಈ ಕೆಳಗಿನ ದೂರವಾಣಿಗೆ ಕರೆ ಮಾಡಲು ಕೋರಿದೆ.
88848 61088

**ಮನೆ ಶಿಫ್ಟಿಂಗ್‌ಗಾಗಿ ಸಂಪರ್ಕಿಸಿ**
86181 82332

**ಬೇಕಾಗಿದ್ದಾರೆ**
ಡಿಜಿಟಲ್ ಮಾರ್ಕೆಟಿಂಗ್ ಕೆಲಸಕ್ಕೆ ಅನುಭವವುಳ್ಳ ಅಭ್ಯರ್ಥಿಗಳು ಬೇಕಾಗಿದ್ದಾರೆ.
62628 62622

**7 Hills Prime Products**
ಒಳ್ಳೆಯ ಗುಣ ಮಟ್ಟದ ರೋಸ್ಟೆಡ್ ಶೇಂಗಾ ಬೀಜಗಳು ಹೋಲ್ ಸೇಲ್ ದೊರೆಯುತ್ತದೆ.
ಸಂಪರ್ಕಿಸಿ
9606864777

**ಬೇಕಾಗಿದ್ದಾರೆ**
ಸೇವಾ ಸಿಂಧೂ ಮತ್ತು ಡಿಟಿಪಿ ಕೆಲಸಕ್ಕಾಗಿ ಬೇಕಾಗಿದ್ದಾರೆ.3 ವರ್ಷ ಅನುಭವವುಳ್ಳ, ಕಂಪ್ಯೂಟರ್ ಜ್ಞಾನ ಹೊಂದಿರಬೇಕು. Timing 10-7 Pm, ಸಂಬಳ 8000
ಶ್ರೀ ತಿರುಮಲ ಡಿಟಿಪಿ ಮತ್ತು ಜೆರಾಕ್ಸ್ ಸೆಂಟರ್
ನ್ಯೂ ಆರ್.ಟಿ.ಓ., ಆಫೀಸ್ ಹತ್ತಿರ ಕೊಂಡಜ್ಜಿ ರೋಡ್, ದಾವಣಗೆರೆ.
81976 33555

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day nutana collage road, Vidyanagara 2nd main, Davangere
77603 16576
90080 55813

**Room For Rent**
Single Room attached booth room 14x14 ft, 2nd floor, 4th Main, 9th cross, P.J. Extenstion Davanagere
94489 29509

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಓಂ ಶ್ರೀ ದುರ್ಗಾದೇವಿ ಜ್ಯೋತಿಷ್ಯಾಲಯ**
ಪಂಡಿತ್ ಶ್ರೀ ಎಂ.ಜಿ.ರಾವ್
ನುಡಿದಂತೆ ನಡೆಯುವುದು ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆ ಇದ್ದರೂ ಚಿಂತಿಸಬೇಡಿ, ಶ್ರೀ ದುರ್ಗಾದೇವಿ ಪೂಜಾ ಅನುಗ್ರಹದಿಂದ ಪರಿಹಾರ ಶತಸಿದ್ಧ. ಇಂದೇ ಭೇಟಿ ನೀಡಿ.
ಮನೆ ವಿಳಾಸ : ಹದಡಿ ರಸ್ತೆ, ಮೋರ್ ಎದುರು, ದಾವಣಗೆರೆ.
ಮೊ: 98807 73186

**Professional make up Artist Course**
one Month Intense Bridal make up Course. Registration are open (only for ladies) certified course more information call
70190 73324

**ನೇರ ಪರೀಕ್ಷೆಗಳು**
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಹೊಸ ಚೀಟಿ ಗುಂಪುಗಳು**
ಶ್ರೀ ಮಾರುತಿ ಚಿಟ್ ಫಂಡ್ಸ್ (ರಿ.)
ಕೆ.ಬಿ. ಬಡಾವಣೆ, ದಾವಣಗೆರೆ.
10,000x25=2,50,000/-
15,000x30=4,50,000/-
4000x25=1,00.000/-
7795149297, 9986122909

# ಟೂಲ್‌ಕಿಟ್ : ಮಾಹಿತಿ ಸೋರಿಕೆಯಾಗದಂತೆ ಅರ್ಜಿ

ನವದೆಹಲಿ, ಫೆ. 18 - ರೈತರ ಪ್ರತಿಭಟನೆಯ ಟೂಲ್‌ಕಿಟ್ ರೂಪಿಸಿದ ಆರೋಪ ಎದುರಿಸುತ್ತಿರುವ ಪರಿಸರ ಕಾರ್ಯಕರ್ತೆ ದಿಶಾ ರವಿ ಅವರು ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಿದ್ದು, ತಮ್ಮ ವಿರುದ್ಧ ದಾಖಲಿಸಿರುವ ಎಫ್.ಐ.ಆರ್. ಕುರಿತ ಯಾವುದೇ ತನಿಖಾ ಮಾಹಿತಿ ಸೋರಿಕೆ ಮಾಡದಂತೆ ಪೊಲೀಸರಿಗೆ ನಿರ್ದೇಶನ ನೀಡಬೇಕೆಂದು ಕೇಳಿದ್ದಾರೆ.

ದಿಶಾ ಪರವಾಗಿ ಹಾಜರಿದ್ದ ವಕೀಲ ಅಭಿನವ್ ಸೆಖ್ರಿ, ಈ ಪ್ರಕರಣ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬರುವುದನ್ನು ಕಾಯುತ್ತಿದ್ದೇನೆ. ನಂತರವೇ ಹೇಳಿಕೆ ನೀಡುತ್ತೇನೆ ಎಂದಿದ್ದಾರೆ. ದಿಶಾ ನಡೆಸಿದ ಖಾಸಗಿ ಚಾಟ್‌ಗಳನ್ನು ಮಾಧ್ಯಮಗಳು ಪ್ರಕಟಿಸದಂತೆ ನಿರ್ಬಂಧ ಹೇರಬೇಕೆಂದೂ ಅರ್ಜಿಯಲ್ಲಿ ಕೋರಲಾಗಿದೆ.

ಪರಿಸರ ಕಾರ್ಯಕರ್ತೆ ಗ್ರೆಟ್ ಥನ್‌ಬರ್ಗ್ ಪ್ರಕಟಿಸಿದ್ದ ಟೂಲ್‌ಕಿಟ್ ಕುರಿತು ದೆಹಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ದಿಶಾ ರವಿಯನ್ನು ಪೊಲೀಸರು ಬಂಧಿಸಿದ್ದಾರೆ. ಮುಂಬೈ ವಕೀಲೆ ಜೆಕೊಬ್ ಹಾಗೂ ಪುಣೆಯ ಇಂಜಿನಿಯರ್ ಶಂತನು ಮುಲುಕ್‌ಗೆ ನ್ಯಾಯಾಲಯ ಜಾಮೀನು ನೀಡಿದೆ. ಈ ಮೂವರು ಟೂಲ್‌ಕಿಟ್ ರೂಪಿಸಿದ್ದಾರೆ ಎಂದು ಆರೋಪಿಸಲಾಗಿದೆ.

# ನಿಟ್ಟೂರಿನಲ್ಲಿ ನಾಳೆ ಗ್ರಾಮ ವಾಸ್ತವ್ಯ



ಮಲೇಬೆನ್ನೂರು, ಫೆ.18- ಕಂದಾಯ ಸಚಿವ ಆರ್. ಅಶೋಕ್ ಅವರ ಸೂಚನೆಯಂತೆ ತಿಂಗಳ ಪ್ರತಿ 3ನೇ ಶನಿವಾರ ಕಂದಾಯ ಇಲಾಖೆಯ ಅಧಿಕಾರಿಗಳು ಗ್ರಾಮಗಳಲ್ಲಿ ವಾಸ್ತವ್ಯ ಮಾಡಲಿದ್ದು, ಹರಿಹರ ತಾಲ್ಲೂಕಿನಲ್ಲಿ ವಾಸ್ತವ್ಯಕ್ಕೆ ನಿಟ್ಟೂರು ಗ್ರಾಮವನ್ನು ಆಯ್ಕೆ ಮಾಡಲಾಗಿದೆ.

ಈ ಹಿನ್ನೆಲೆಯಲ್ಲಿ ಗುರುವಾರ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಉಪತಹಶೀಲ್ದಾರ್ ಆರ್. ರವಿ ಅವರು ನಿಟ್ಟೂರು ಗ್ರಾಮಕ್ಕೆ ಭೇಟಿ ನೀಡಿ, ಗ್ರಾಮ ವಾಸ್ತವ್ಯದ ಸಿದ್ಧತೆ ಕುರಿತು ಪೂರ್ವಭಾವಿಯಾಗಿ ಸ್ಥಳ ಪರಿಶೀಲಿಸಿದರು.

ಸರ್ಕಾರಿ ಪ್ರೌಢಶಾಲೆ ಆವರಣವನ್ನು ಕಾರ್ಯಕ್ರಮಕ್ಕೆ ನಿಗದಿ ಮಾಡಿದ್ದು, ಅಲ್ಲಿ ಅರ್ಜಿ ಸ್ವೀಕರಿಸುವ ಸ್ಥಳ, ಆರೋಗ್ಯ ತಪಾಸಣೆ ಕೇಂದ್ರ, ಆಧಾರ್ ಕೇಂದ್ರಗಳನ್ನು ಗುರುತು ಮಾಡಿದರು.

ಶನಿವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಅರ್ಜಿ ಸ್ವೀಕಾರ, ನಂತರ ವಿವಾದದ ಸ್ಥಳಗಳಿದ್ದರೆ ಪರಿಶೀಲನೆ. ಸಾಯಂಕಾಲ 4 ರಿಂದ ವೇದಿಕೆ ಕಾರ್ಯಕ್ರಮ ಮಾಡಿ ಫಲಾನುಭವಿಗಳಿಗೆ ಜನಪ್ರತಿನಿಧಿಗಳ ಸಮ್ಮುಖದಲ್ಲಿ ಸೌಲಭ್ಯಗಳನ್ನು ವಿತರಿಸಲಾಗುವುದೆಂದು ಉಪತಹಶೀಲ್ದಾರ್ ರವಿ ಮಾಹಿತಿ ನೀಡಿದರು. ಗ್ರಾಮದಲ್ಲಿ ಚರಂಡಿ, ರಸ್ತೆ ಸ್ವಚ್ಛತೆ ಹಾಗೂ ರಸ್ತೆ ಪಕ್ಕದಲ್ಲಿರುವ ತಿಪ್ಪೆಗಳ ತೆರವಿಗೆ ಗ್ರಾ.ಪಂ. ಗೆ ಸೂಚನೆ ನೀಡಲಾಯಿತು.

ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಶ್ರೀಧರ್, ಗ್ರಾಮಸೇವಕ ಮಾರುತಿ ಹಾಗೂ ಶಾಲಾ ಶಿಕ್ಷಕರು ಈ ವೇಳೆ ಹಾಜರಿದ್ದರು.

# ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಫೆ. 18 - ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ (http://ssp.karnataka.gov.in) ನಲ್ಲಿ ನವೀನ ವಿದ್ಯಾರ್ಥಿ ಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಇದೇ ದಿನಾಂಕ 15 ರಿಂದ ಬರುವ ಮಾರ್ಚ್ 15 ರವರೆಗೆ ಕಾಲಾವಕಾಶ ಕಲ್ಪಿಸಲಾಗಿದ್ದು, ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಅರ್ಜಿ ನೋಂದಾಯಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು(ಗ್ರೇಡ್-2) ತಿಳಿಸಿದ್ದಾರೆ.

# ಮನಸ್ಸಿನಲ್ಲಿ ದಾರಿದ್ರ್ಯವಿದ್ದರೆ ಕನ್ನಡ ನಾಡಿನ ಬಗ್ಗೆ ತಿಳಿಯಲಾಗದು

## 'ಗುರು ಚೇತನ' ಹಾಗೂ 'ಗುರು ಶ್ರೇಷ್ಠ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಾಗ್ಮಿ ಹಿರೇಮಗಳೂರು ಕಣ್ಣನ್

ದಾವಣಗೆರೆ, ಫೆ.18- ಮನಸ್ಸಿನಲ್ಲಿ ದಾರಿದ್ರ್ಯವಿ ದ್ದರೆ ಕನ್ನಡ ನಾಡಿನ ಬಗ್ಗೆ ತಿಳಿಯಲಾಗದು ಎಂದು ಖ್ಯಾತ ವಾಗ್ಮಿ ಹಿರೇಮಗಳೂರು ಕಣ್ಣನ್ ಹೇಳಿದರು.





ಶಿಕ್ಷಣ ತಜ್ಞ ಡಾ.ಹೆಚ್.ವಿ. ವಾಮದೇವಪ್ಪ ಚಾರಿಟಬಲ್ ಮತ್ತು ಎಜುಕೇಷನಲ್ ಟ್ರಸ್ಟ್ ವತಿಯಿಂದ ನಗರದ ಮಾಗನೂರು ಬಸಪ್ಪ ಸಭಾ ಭವನದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ 'ಗುರು ಚೇತನ' ಹಾಗೂ 'ಗುರು ಶ್ರೇಷ್ಠ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ನಮ್ಮ ಭಾಷೆ ಹಾಗೂ ಭಾವ ಸಂಪತ್ತಿನಲ್ಲಿ ಯಾವುದೇ ದಾರಿದ್ರ್ಯವಿಲ್ಲ. ನಾಡಿನ ಬಗ್ಗೆ ಅರಿತಿಲ್ಲ ವೆಂದರೆ ಮನಸ್ಸಿನಲ್ಲಿ ದಾರಿದ್ರ್ಯವಿದೆ ಎಂದರ್ಥ ಎಂದರು. ಭಾವಕ್ಕೆ ಭಾಷೆ ಅಧೀನ. ಮನುಷ್ಯನಲ್ಲಿ ಭಾವನೆಗಳಿಲ್ಲ ದಿದ್ದರೆ ಪ್ರಯೋಜನವಿಲ್ಲ. ನಮ್ಮೆಲ್ಲರಿ ಗೂ ಭಾವನಾತ್ಮಕ ಸಂಬಂಧಿಗಳಿವೆ ಎಂಬುದನ್ನು ಮರೆಯಬಾರದು ಎಂದು ಹೇಳಿದರು.

ಯಾವುದೇ ದೇಶದ ಮುಖ್ಯಸ್ಥನಿಗೆ ಬುದ್ಧಿ ಹೇಳುವ ಶಕ್ತಿ ಶಿಕ್ಷಕನಿಗಿರುತ್ತದೆ. ಶಿಕ್ಷಕ ಡಾ. ಸರ್ವಪಳ್ಳಿ ರಾಧಾ ಕೃಷ್ಣನ್. ಅವರು ಸ್ಟಾಲಿನ್ ಭುಜದ ಮೇಲೆ ಕೈ ಇಟ್ಟುಬುದ್ಧಿ ಹೇಳಿದ್ದರು. ಅಲ್ಲದೆ ಮೋವೋ ಕೆನ್ನೆಗೆ ಒಡೆದು ತಿಳಿ ಹೇಳಿದ್ದರು. ನಂತರ ಅಲ್ಲಿನ ಜನತೆ ಈ ಘಟನೆಯನ್ನು ವಿರೋಧಿಸಿದ್ದಾಗ ನಾನು ಶಿಕ್ಷಕ ಮಾವೋ ನನ್ನ ವಿದ್ಯಾರ್ಥಿ ಎಂದು ಹೇಳಿದ್ದರು. ಈ ರೀತಿ ಶಿಕ್ಷಕನಾದವನಿಗೆ ಎಂತಹ ವ್ಯಕ್ತಿಗಳಿಗಾದರೂ ಬುದ್ದಿ ಹೇಳುವ ಸಾಮರ್ಥ್ಯವಿದೆ. ಶಿಕ್ಷಕ ವೃತ್ತಿ ಶ್ರೇಷ್ಠ ವೃತ್ತಿ ಎಂದು ಹೇಳಿದರು.

ಪ್ರತಿಯೊಬ್ಬರಲ್ಲೂ ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಿಕೊಳ್ಳಬೇಕು. ಇಂತಹ ಸನ್ಮಾನ ಕಾರ್ಯಕ್ರಮಗಳು ಪ್ರತಿಭೆಗಳನ್ನು ಪರಿಚಯಿಸಲು ಸಹಕಾರಿಯಾಗಿವೆ ಎಂದು ಹೇಳಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರೊ.ಶರಣಪ್ಪ ವಿ.ಹಲಸೆ, ಮೌಲ್ಯಾಧಾರಿತ ಜೀವನ ನಡೆಸಬೇಕು. ಮತ್ತೊಬ್ಬರಿಗೆ ತೊಂದರೆ ನೀಡಬಾರದು. ಜೀವನದ ಆರಂಭ ಹಾಗೂ ಕೊನೆಯ ಮಧ್ಯದಲ್ಲಿ ನಾವು ಮಾಡುವ ಉತ್ತಮ ಕೆಲಸಗಳೇ ಶಾಶ್ವತ ಎಂದರು.

ದೇವಮಾನರಾಗುವ ಶಕ್ತಿ ಪ್ರತಿಯೊಬ್ಬರಲ್ಲೂ ಇರುತ್ತದೆ. ಬಸವಣ್ಣನವರ ನಡೆ-ನುಡಿಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಂಡು ಮುನ್ನಡೆಯಬೇಕು. ಎಲ್ಲರೂ ತಾವು ಮಾಡುವ ಕಾಯಕದ ಮಹತ್ವ ಅರಿತರೆ ಸಂತೋಷ ಕಾಣಬಹುದು ಎಂದರು.

ಚಿಕ್ಕಮಗಳೂರಿನ ಎಂ.ಎಲ್.ಎಂ.ಎನ್. ಶಿಕ್ಷಣ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ.ಜಿ.ಎಂ. ಗಣೇಶ್ ಅವರಿಗೆ 'ಗುರು ಚೇತನ' ಹಾಗೂ ಚನ್ನಗಿರಿ ತಾಲ್ಲೂಕು ಸರ್ಕಾರಿ ಪ್ರೌಢಶಾಲೆಯ ಪ್ರಭಾರಿ ಮುಖ್ಯಶಿಕ್ಷಕ ಜಿ.ಪಿ. ಲಿಂಗೇಶ ಮೂರ್ತಿ ಅವರಿಗೆ 'ಗುರು ಶ್ರೇಷ್ಠ'ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಮಹಾತ್ಮ ಫುಲೆ ಪ್ರಶಸ್ತಿ ಪುರಸ್ಕೃತೆ ಹೆಚ್.ಆರ್. ವಿಶಾಲಾಕ್ಷಿ ಹಾಗೂ ವಿದ್ಯಾ ಸರಸ್ವತಿ ಪ್ರಶಸ್ತಿ ಪುರಸ್ಕೃತೆ ಎ.ಸಿ. ಶಶಿಕಲಾ ಅವರಿಗೆ ಮತ್ತು 2019-20ನೇ ಸಾಲಿನಲ್ಲಿ ಶಿಕ್ಷಣ ಶಾಸ್ತ್ರದ ಪಿ.ಹೆಚ್.ಡಿ. ಪದವಿ ಪಡೆದವರಿಗೆ ಅಭಿನಂದಿಸಲಾಯಿತು.

ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಕಾರ್ಯದರ್ಶಿ ಎಂ.ಬಿ. ಸಂಗಮೇಶಗೌಡರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷ ಶಾಂತವೀರಪ್ಪ, ಗೌರವಾಧ್ಯಕ್ಷ ಹೆಚ್.ವಿ. ವಾಮದೇವಪ್ಪ ಇತರರು ಉಪಸ್ಥಿತರಿದ್ದರು. ಡಾ.ಕೆ.ಸಿ. ಶಿವರಾಜ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

# ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ : ಬೈಕ್ ರ್‍ಯಾಲಿ



ದಾವಣಗೆರೆ, ಫೆ.18- ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ 394ನೇ ಜಯಂತ್ಯೋತ್ಸವದ ಅಂಗವಾಗಿ ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ವತಿಯಿಂದ ನಗರದಲ್ಲಿ ಇಂದು ಪುರುಷರ ಮತ್ತು ಮಹಿಳೆಯರ ಬೃಹತ್ ಬೈಕ್ ರ್‍ಯಾಲಿ ನಡೆಸಲಾಯಿತು.

ಶಿವಾಜಿ ನಗರದ ಶ್ರೀ ದುರ್ಗಾಂಬಿಕ ದೇವಸ್ಥಾನದಿಂದ ಆರಂಭಗೊಂಡ ಬೈಕ್ ರ್‍ಯಾಲಿಗೆ ಸಮಾಜದ ಅಧ್ಯಕ್ಷ ಮಾಲತೇಶ್ ರಾವ್ ಜಾಧವ್ ಹಾಗೂ ಜಿಲ್ಲಾ ಪಂಚಾಯತ್ ಸದಸ್ಯ ತೇಜಸ್ವಿ ಪಾಟೀಲ್ ಚಾಲನೆ ನೀಡಿದರು.

ರ್‍ಯಾಲಿಯು ಕಾಯಿಪೇಟೆ, ವಸಂತ ರಸ್ತೆ, ಪಿ.ಬಿ. ರಸ್ತೆ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಹೊಂಡದ ವೃತ್ತದಲ್ಲಿ ಸಮಾರೋಪಗೊಂಡಿತು.

ಮುಖಂಡರುಗಳಾದ ಸತ್ಯನಾರಾಯಣ ಜಾಧವ್, ಸೋಮಶೇಖರ್ ಪವಾರ್, ಬಸವರಾಜ್ ಮಾನೆ, ವೈ. ಮಲ್ಲೇಶ್, ಸಂತೋಷ, ಹನುಮಂತ ರಾವ್ ಸುರ್ವೆ, ಗಣೇಶ್ ಸುರ್ವೆ, ಅರುಣ್ ಮಾನೆ, ಶ್ರೀನಿವಾಸ ಪಿಸಾಳೆ ಸೇರಿದಂತೆ ಅನೇಕರು ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

# ಜಿಗಳಿ ಪಿ.ಎ.ಸಿ.ಎಸ್ ಅಧ್ಯಕ್ಷರಾಗಿ ಬಸವರಾಜಪ್ಪ, ಉಪಾಧ್ಯಕ್ಷರಾಗಿ ರಂಗಪ್ಪ

ಮಲೇಬೆನ್ನೂರು, ಫೆ.18- ಜಿಗಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಜಿ.ಬೇವಿನಹಳ್ಳಿಯ ಜಿ. ಬಸವರಾಜಪ್ಪ ಮತ್ತು ಉಪಾಧ್ಯಕ್ಷ ರಾಗಿ ಜಿಗಳಿಯ ಎ.ಕೆ. ರಂಗಪ್ಪ ಅವರು ಗುರುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹಳ್ಳಿಹಾಳ್ ಮಲ್ಲನ ಗೌಡ ಮತ್ತು ಖಾಸೀಂ ಸಾಬ್ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳು ತೆರವಾಗಿದ್ದವು. ಸಹಕಾರ ಅಭಿವೃದ್ಧಿ ಅಧಿಕಾರಿ ಎನ್.ಜಿ. ರುದ್ರಪ್ಪ ಚುನಾವಣಾಧಿಕಾರಿಯಾಗಿದ್ದರು. ಸಂಘದ ಸಿಇಓ ಎನ್.ಎನ್. ತಳವಾರ್ ಹಾಜರಿದ್ದರು.



# 2,500 ಸ್ಮಾರ್ಟ್ ಕ್ಲಾಸ್ ಕೊಠಡಿಗಳ ರಚನೆ : ಡಿಸಿಎಂ

ಬೆಂಗಳೂರು, ಫೆ. 18 - ಕೊವಿಡೋತ್ತರ ಕಾಲದಲ್ಲಿ ಡಿಜಿಟಲ್ ಕಲಿಕೆಯನ್ನು ಪ್ರೋತ್ಸಾಹಿ ಸುವ ಉದ್ದೇಶದಿಂದ ಇನ್ನು ಎರಡು ತಿಂಗಳಲ್ಲಿ ರಾಜ್ಯದ ಉನ್ನತ ಶಿಕ್ಷಣ ವ್ಯಾಪ್ತಿಯಲ್ಲಿ ಶಿಕ್ಷಣ ಸಂಸ್ಥೆಗಳ 2,500 ತರಗತಿ ಕೊಠಡಿಗಳನ್ನು ಸ್ಮಾರ್ಟ್‌ಕ್ಲಾಸ್ ರೂಮುಗಳನ್ನಾಗಿ ಪರಿವರ್ತನೆ ಮಾಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಪ್ರಕಟಿಸಿದ್ದಾರೆ.

ಬೆಂಗಳೂರು ಕಲಾ ಕಾಲೇಜ್‌ನಲ್ಲಿ ಗುರುವಾರ ನೂತನ ಜಿಮ್ ಹೌಸ್ ಹಾಗೂ ವಾರ್ಷಿಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ ನಂತರ ಮಾತನಾಡಿದ ಅವರು, ಕೋವಿಡ್ ಕಾರಣಕ್ಕೆ ಕಲಿಕೆಯ ಮಾದರಿಗಳೇ ಬದಲಾಗಿವೆ.

ಹೀಗಾಗಿ ಸರಕಾರ ತಂತ್ರಜ್ಞಾನವನ್ನು ಬಳಸಿಕೊಂಡು ಸ್ಮಾರ್ಟ್‌ಕ್ಲಾಸ್ ರೂಂ ಪರಿಕಲ್ಪನೆಯನ್ನು ರೂಪಿಸಲಾಗಿದೆ. 2,500 ತರಗತಿ ಕೊಠಡಿಗಳು ಸ್ಮಾರ್ಟ್ ಕ್ಲಾಸ್‌ಗಳು ಆದ ನಂತರ ಮುಂಬರುವ 6 ತಿಂಗಳಲ್ಲಿ ಇನ್ನೂ 5,500 ತರಗತಿ ಕೊಠಡಿಗಳನ್ನು ಸ್ಮಾರ್ಟ್‌ಕ್ಲಾಸ್ ರೂಮುಗಳಾಗಿ ರೂಪಿಸಲಾಗುವುದು ಎಂದರು.

ಹೈಸ್ಪೀಡ್ ಇಂಟರ್‌ನೆಟ್, ಅತ್ಯಾಧುನಿಕ ಗುಣಮಟ್ಟದ ಟ್ಯಾಬ್ ನೀಡುವುದು ಹಾಗೂ ಸಮಗ್ರ ಕಲಿಕಾ ವ್ಯವಸ್ಥೆ (ಎಲ್‌ಎಂಎಸ್)ಯನ್ನು ಜಾರಿ ಮಾಡುವ ಮೂಲಕ ಸ್ಮಾರ್ಟ್‌ಕ್ಲಾಸ್ ರೂಂ ವ್ಯವಸ್ಥೆಯನ್ನು ಪರಿಪೂರ್ಣಗೊಳಿಸಲಾಗುವುದು. ಇದರಿಂದ ವಿದ್ಯಾರ್ಥಿಗಳ ಕಲಿಕೆಯ ಗತಿಯೇ ಬದಲಾಗುತ್ತದೆ. ಗುಣಮಟ್ಟದ ಕಲಿಕೆಯ ಕನಸು ಈ ಮೂಲಕ ಸಾಕಾರವಾಗುತ್ತದೆ ಎಂದು ಉಪ ಮುಖ್ಯಮಂತ್ರಿ ಹೇಳಿದರು.

ದಿ ದಾವಣಗೆರೆ ಗನ್ನಿ ಮರ್ಚೆಂಟ್ಸ್ ಅಸೋಸಿಯೇಷನ್ (ರಿ.)

# 110/101, ಬಿ.ಟಿ. ಲೇಔಟ್, ಆರ್.ಎಂ.ಸಿ. ಲಿಂಕ್ ರಸ್ತೆ, ಹಿಂಭಾಗ, 1ನೇ ಕ್ರಾಸ್, ದಾವಣಗೆರೆ- 577001

ದಿನಾಂಕ : 18-02-2021ರಂದು ನಡೆದ ವಾರ್ಷಿಕ ಮಹಾಸಭೆಯಲ್ಲಿ ಆಯ್ಕೆಗೊಂಡ ನೂತನ ಕಾರ್ಯಕಾರಿ ಮಂಡಳಿ




ಶುಭಕೋರುವವರು : ದಿ ದಾವಣಗೆರೆ ಗನ್ನಿ ಮರ್ಚೆಂಟ್ಸ್ ಅಸೋಸಿಯೇಷನ್ ಸದಸ್ಯರು

# ಆದಿಕವಿ ಪುರಸ್ಕಾರ 'ಅಂತರ್ಜಾಲ'ದಲ್ಲಿ



ಸಿರಿಗೆರೆ, ಫೆ. 18- ಇದೇ ದಿನಾಂಕ 21ರ ಭಾನುವಾರ ಸಿರಿಗೆರೆಯಲ್ಲಿ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಪ್ರದಾನ ಮಾಡಲಾಗುತ್ತಿರುವ 'ಆದಿಕವಿ ಪುರಸ್ಕಾರ' ಬಹಿರಂಗ ಸಭೆಯಲ್ಲವಾದ್ದರಿಂದ ಅಭಿಮಾನಿಗಳು, ಶಿಷ್ಯರು ಸಿರಿಗೆರೆಗೆ ಬಾರದಿರಲು ಮಠದ ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

ಕೊರೊನಾ ಕಾರಣದಿಂದ ಅಂತರ್ಜಾಲದ ಮುಖೇನ ಸಮಾರಂಭ ನಡೆಯಲಿದೆ. ಶಿಷ್ಯವೃಂದ ಹಾಗೂ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಜಗದ್ಗುರುಗಳು ಕೈಗೊಂಡಿರುವ ನಿರ್ಧಾರವನ್ನು ಎಲ್ಲರೂ ಗೌರವಿಸಿ ಮನೆಯಲ್ಲಿಯೇ ಅಂತರ್ಜಾಲದಲ್ಲಿ ಕಾರ್ಯಕ್ರಮ ವೀಕ್ಷಿಸಲು ಮಠದ ಕಾರ್ಯದರ್ಶಿಗಳು ಕೋರಿದ್ದಾರೆ.

ಅಖಿಲ ಭಾರತೀಯ ಸಾಹಿತ್ಯ ಪರಿಷತ್ ನೀಡುತ್ತಿರುವ ಪ್ರಶಸ್ತಿ ಸಮಾರಂಭವನ್ನು ಅಂತರ್ಜಾಲದಲ್ಲಿ (YouTube: Taralabalu Math Sirigere) ಭಾನುವಾರ ಬೆಳಿಗ್ಗೆ 11 ಗಂಟೆಯಿಂದ ನೇರ ಪ್ರಸಾರ ಮಾಡಲು ವ್ಯವಸ್ಥೆ ಮಾಡಲಾಗಿದೆ.

# 25 ನಗರಗಳಲ್ಲಿ ಕೇಂದ್ರದಿಂದ ಮಕ್ಕಳ ಸ್ನೇಹಿ ಯೋಜನೆ

ನವದೆಹಲಿ, ಫೆ. 18 – ಬೆಂಗಳೂರು ಹಾಗೂ ಹುಬ್ಬಳ್ಳಿ - ಧಾರವಾಡ ಸೇರಿದಂತೆ ದೇಶದ 25 ನಗರಗಳಲ್ಲಿ ಮಕ್ಕಳ ಸ್ನೇಹಿ ನೆರೆಹೊರೆ ಎಂಬ ಯೋಜನೆ ಜಾರಿಗೆ ತರಲು ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ ನಿರ್ಧರಿಸಿದೆ.

ಹದಿಹರೆಯದ ಮಕ್ಕಳು, ಕಾಳಜಿ ವಹಿಸುವವರು ಹಾಗೂ ಕುಟುಂಬದವರ ಜೀವನದ ಗುಣಮಟ್ಟ ಹೆಚ್ಚಿಸಲು ಈ ಯೋಜನೆ ಜಾರಿಗೆ ತರಲಾಗುತ್ತಿದೆ.

ಅಗರ್ತಲ, ಬೆಂಗಳೂರು, ಕೊಯಂಬತ್ತೂರು, ಧರ್ಮಶಾಲಾ, ಈರೋಡ್, ಹುಬ್ಬಳ್ಳಿ - ಧಾರವಾಡ, ಹೈದರಾಬಾದ್, ಇಂದೋರ್, ಜಬಲ್ಪುರ, ಕಾಕಿನಾಡ, ಕೊಚ್ಚಿ, ಕೊಹಿಮಾ, ಕೋಟ, ನಾಗಪುರ, ರಾಜಕೋಟ್, ರಾಂಚಿ, ರೊಹ್ತಾಕ್, ರೂರ್ಕೆಲ, ಸೇಲಂ, ಸೂರತ್, ತಿರುವನಂತಪುರಂ, ತಿರುಪ್ಪೂರು, ಉಜ್ಜೈನ್, ವಡೋದರ ಹಾಗೂ ವಾರಂಗಲ್‌ಗಳನ್ನು ಈ ಯೋಜನೆಗೆ ಆಯ್ಕೆ ಮಾಡಲಾಗಿದೆ.

# ನಗರದಲ್ಲಿ ನಾಡಿದ್ದು ಜೈನ ಸಮುದಾಯದ ಸನ್ಯಾಸ ಸ್ವೀಕೃತಿ ಸಮಾರಂಭ



ದಾವಣಗೆರೆ, ಫೆ.18- ಜೈನ ಸನ್ಯಾಸ ಸ್ವೀಕೃತಿ (ದೀಕ್ಷೆ) ಮಹೋತ್ಸವ ಸಮಾರಂಭವು ನಾಡಿದ್ದು ದಿನಾಂಕ 22ರ ಸೋಮವಾರ ಆವರಗೆರೆಯಲ್ಲಿರುವ ಶ್ರೀ ನಾಗೇಶ್ವರ ಪಾರ್ಶ್ವ-ಭೈರವ ಧಾಮದಲ್ಲಿ ನಡೆಯಲಿದೆ.

ನಗರದ 8 ಜನರೂ ಸೇರಿದಂತೆ ಒಟ್ಟು 9 ಜನರು ಜೈನ ಸನ್ಯಾಸ ಸ್ವೀಕರಿಸಲಿದ್ದು, ಈ ಸಂಬಂಧ, ದಿನಾಂಕ 21ರ ಭಾನುವಾರ ಭವ್ಯ ಮೆರವಣಿಗೆ ಏರ್ಪಾಡಾಗಿದ್ದು, ದಿನಾಂಕ 22ರ ಸೋಮವಾರ ಬೆಳಿಗ್ಗೆ 8 ರಿಂದ ಸನ್ಯಾಸ ಸ್ವೀಕೃತಿ (ದೀಕ್ಷೆ) ಸಭಾ ಕಾರ್ಯಕ್ರಮ ಜರುಗಲಿದೆ.

ವರದಿಚಂದ್ ಜೀ, ಅಶೋಕ್ ಕುಮಾರ್, ಭಾವನಾ ಅಶೋಕ್ ಕುಮಾರ್, ದೀಪಿಕಾ ಕುಮಾರಿ, ಲಕ್ಷ್ ಕುಮಾರ್, ಜಿನಾಂಕ್ ಕುಮಾರ್, ಪಕ್ಷಾಲ್ ಕುಮಾರ್, ಮೋಕ್ಷ್ ಕುಮಾರ್, ಲಬ್ಧಿ ಕುಮಾರಿ ಅವರುಗಳು ಸನ್ಯಾಸ ದೀಕ್ಷೆ ಸ್ವೀಕರಿಸಲಿದ್ದಾರೆ.

ಸನ್ಯಾಸ ದೀಕ್ಷೆ ಸ್ವೀಕರಿಸಲು ಲಕ್ಷ್ ಕುಮಾರ್ ಡಿ.ಜೈನ್ ಅವರು ನಾಳೆ ದಿನಾಂಕ 19 ರ ಶುಕ್ರವಾರ ಚೆನ್ನೈನಿಂದ ನಗರಕ್ಕೆ ಆಗಮಿಸಲಿದ್ದು, ಅವರನ್ನು ಸಂಜೆ 6 ಗಂಟೆಗೆ ಸ್ಥಳೀಯ ವರ್ತುಲ ರಸ್ತೆಯಲ್ಲಿರುವ ಶ್ರೀ ಶಾಂತಲಾ ದೇವಸ್ಥಾನದಿಂದ ಚೌಕಿಪೇಟೆಯಲ್ಲಿರುವ ದೇವಸ್ಥಾನದವರೆಗೆ ಮೆರವಣಿಗೆ ಮೂಲಕ ಕರೆದೊಯ್ಯಲಾಗುತ್ತದೆ.

ಸ್ಥಳೀಯ ಶ್ರೀ ಶ್ವೇತಾಂಬರ ಜೈನ ಸಮಾಜದ ನೇತೃತ್ವದಲ್ಲಿ ಜೈನ್ ವೀರ್ಸ್, ಸೈಕಿಕ್ ಕ್ಲಬ್ ಮತ್ತು ಜೈನ್ ಯೂತ್ಸ್ ಇವರುಗಳ ಸಹಯೋಗದೊಂದಿಗೆ ಆಯೋಜನೆಗೊಂಡಿರುವ ಈ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ದೀಕ್ಷದಾತ ಪರಮ ಪೂಜ್ಯ ಆಚಾರ್ಯ ಶ್ರೀಮದ್ ವಿಜಯ ಉದಯ್‌ಪ್ರಭ್ ಸುರೀಶ್ವರಜೀ ಮಹಾರಾಜ್ ಅವರು ವಹಿಸುವರು.

# ಬೆಳೆಗೆ ಬೆಂಕಿ ಹಚ್ಚಲೂ ಸಿದ್ಧರಾಗಿ

## ರೈತರಿಗೆ ಟಿಕಾಯತ್ ಕರೆ

ಹಿಸಾರ್, ಫೆ. 18 – ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವ ವರೆಗೂ ಮನೆಗೆ ಮರಳುವುದಿಲ್ಲ ಎಂದು ಹೇಳಿರುವ ಭಾರತೀಯ ಕಿಸಾನ್ ಯೂನಿಯನ್ ಮುಖಂಡ ರಾಕೇಶ್ ಟಿಕಾಯತ್, ಸಮಯ ಬಂದರೆ ರೈತರು ತಮ್ಮ ಬೆಳೆಗಳಿಗೆ ಬೆಂಕಿ ಹಚ್ಚಲೂ ಸಿದ್ಧವಾಗಬೇಕು ಎಂದಿದ್ದಾರೆ.

ಬೆಳೆ ಕಟಾವಿಗೆ ಬಂದಿರುವ ಕಾರಣ ರೈತರು ಹೋರಾಟದಿಂದ ವಾಪಸ್ ಹೋಗಲಿದ್ದಾರೆ ಎಂಬ ಭ್ರಮೆ ಸರ್ಕಾರಕ್ಕೆ ಇರಬಾರದು ಎಂದು ಹರಿಯಾಣದ ಹಿಸಾರ್‌ನ ಖರಕ್ ಪೂನಿಯ ಹಳ್ಳಿಯಲ್ಲಿ ಆಯೋಜಿಸಲಾಗಿದ್ದ ಮಹಾ ಪಂಚಾಯತ್‌ನಲ್ಲಿ ಮಾತನಾಡುತ್ತಿದ್ದ ಅವರು ಹೇಳಿದ್ದಾರೆ.

ಸರ್ಕಾರ ಅನವಶ್ಯಕ ಮಾತನಾಡಿದರೆ ಕಟಾವಿಗೆ ಬಂದಿರುವ ಬೆಳೆಗೆ ಬೆಂಕಿಯನ್ನೂ ಹಚ್ಚಬೇಕು. ಒಂದು ಫಸಲು ತ್ಯಾಗ ಮಾಡಿದರೆ, ರೈತ ಮುಂದಿನ 20 ವರ್ಷಗಳ ಕಾಲ ಬದುಕಿರುತ್ತಾನೆ ಎಂದವರು ತಿಳಿಸಿದ್ದಾರೆ.

ರೈತರು ಫಸಲು ಕಟಾವು ಮಾಡುತ್ತೇವೆ, ಪ್ರತಿಭಟನೆಯನ್ನೂ ನಡೆಸುತ್ತೇವೆ ಎಂಬ ವಿಶ್ವಾಸ ವ್ಯಕ್ತಪಡಿಸಿರುವ ಅವರು, ರೈತರು ತಮ್ಮ ಟ್ರ್ಯಾಕ್ಟರ್‌ಗಳನ್ನು ಸಿದ್ಧವಾಗಿಟ್ಟುಕೊಂಡಿರಬೇಕು. ರೈತ ಸಂಘಟನೆಗಳ ಒಕ್ಕೂಟ ಕರೆ ನೀಡಿದ ತಕ್ಷಣ ದೆಹಲಿಗೆ ಬರಬೇಕು. ಇಡೀ ದೇಶದಲ್ಲಿ ನೇಗಿಲ ಕ್ರಾಂತಿಯಾಗಲಿದೆ ಎಂದು ಟಿಕಾಯತ್ ಹೇಳಿದ್ದಾರೆ.

ಹರಿಯಾಣದ ನಂತರ ಪಶ್ಚಿಮ ಬಂಗಾಳ, ಕರ್ನಾಟಕ, ತಮಿಳುನಾಡು ಹಾಗೂ ಗುಜರಾತ್‌ಗಳಲ್ಲಿಯೂ ಪಂಚಾಯತ್‌ಗಳನ್ನು ಆಯೋಜಿಸಲಾಗುವುದು ಎಂದವರು ತಿಳಿಸಿದ್ದಾರೆ.

ಸಭೆಯಲ್ಲಿ ಮಾತನಾಡಿದ ಹರಿಯಾಣ ಬಿ.ಕೆ.ಯು. ಮುಖ್ಯಸ್ಥ ಗುರ್ನಾಮ್ ಸಿಂಗ್ ಚಡುನಿ, ನೂತನ ಕೃಷಿ ಕಾಯ್ದೆಗಳು ಜಾರಿಯಾದರೆ ರೈತರ ಬೆಳೆಗಳನ್ನು ಬೇಕಾಬಿಟ್ಟಿ ಬೆಲೆಗೆ ಖರೀದಿಸಲಾಗುತ್ತದೆ ಹಾಗೂ ರೈತರು ತಮ್ಮ ಜಮೀನು ಮಾರಲು ಬಲವಂತಪಡಿಸಲಾಗುತ್ತದೆ ಎಂದು ಆರೋಪಿಸಿದ್ದಾರೆ.




# ನಗರದಲ್ಲಿ ಇಂದು ಶಿವಾಜಿ ಜಯಂತ್ಯುತ್ಸವ



ಶ್ರೀ ಛತ್ರಪತಿ ಶಿವಾಜಿ ಮಹಾರಾಜರ 394ನೇ ಜಯಂತ್ಯುತ್ಸವವು ಇಂದು ನಡೆಯಲಿದೆ. ದಾವಣಗೆರೆ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆಗೆ ಶ್ರೀ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಜರುಗಲಿದೆ.

ನಂತರ ಬೆಳಿಗ್ಗೆ 10.30ಕ್ಕೆ ಶಿವಾಜಿ ವೃತ್ತದಲ್ಲಿರುವ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿಗೆ ಜಿಲ್ಲಾಧಿಕಾರಿಗಳು ಮಾಲಾರ್ಪಣೆ ಮಾಡುವರು. ನಂತರ ಬೆಳಿಗ್ಗೆ 11 ಗಂಟೆಗೆ ಶ್ರೀ ಡಿ.ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಅಂಬಾಭವಾನಿ ಸಮುದಾಯ ಭವನದಲ್ಲಿ ಸಭಾ ಕಾರ್ಯಕ್ರಮ ಏರ್ಪಾಡಾಗಿದೆ.

ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಿ. ಮಾಲತೇಶರಾವ್ ಜಾಧವ್ ಅಧ್ಯಕ್ಷತೆ ವಹಿಸಲಿದ್ದಾರೆ. ಶಿವಮೊಗ್ಗದ ಗ್ರಾ.ಪಂ ಪಿಡಿಓ ಶಿವಾಜಿ ಡಿಸ್ಲೆ ಉಪನ್ಯಾಸ ನೀಡಲಿದ್ದಾರೆ.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಸಂಘದ ಗೌರವಾಧ್ಯಕ್ಷ ಯಶವಂತ ರಾವ್ ಜಾಧವ್ ಸೇರಿ ಸಮಾಜದ ಮುಖಂಡರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಸಮಾಜದ ಹಿರಿಯ ಮುಖಂಡ ವೈ.ಮಲ್ಲೇಶ್ ತಿಳಿಸಿದ್ದಾರೆ.

**ಡಿಸೈನರ್ ಬೇಕಾಗಿದ್ದಾರೆ**

ಸಂಜೆ 6 ರಿಂದ ರಾತ್ರಿ 12 ರವರೆಗೆ ಕಂಪ್ಯೂಟರ್ ಡಿಸೈನರ್ ಬೇಕಾಗಿದ್ದಾರೆ. ಇನ್ ಡಿಸೈನ್‌ನಲ್ಲಿ ಅನುಭವವಿರಬೇಕು.
ಭೇಟಿ ಸಮಯ (ಸಂಜೆ 6 ರಿಂದ 8)
78990 09093

# ನಗರದಲ್ಲಿ ಇಂದು ಶ್ರೀ ಸವಿತಾ ಮಹರ್ಷಿ ಜಯಂತಿ



ದಾವಣಗೆರೆ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶ್ರೀ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮವು ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಸವಿತಾ ಸಮಾಜದ ಅಧ್ಯಕ್ಷರೂ, ವಕೀಲರೂ ಆದ ಎನ್. ರಂಗಸ್ವಾಮಿ, ಕಾರ್ಯದರ್ಶಿ ಜಿ.ಎಸ್. ಪರಶುರಾಮ್, ಖಜಾಂಚಿ ಆರ್. ಕರಿಬಸಪ್ಪ ತಿಳಿಸಿದ್ದಾರೆ.

# ಶ್ರೀ ಅನ್ನಪೂರ್ಣೇಶ್ವರಿ ದೇವಿಯ ರಥೋತ್ಸವ ಇಂದು




ದಾವಣಗೆರೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಿ ದೇವಸ್ಥಾನದಲ್ಲಿ ಶ್ರೀ ದೇವಿಯ ರಥೋತ್ಸವವು ಇಂದು ಬೆಳಿಗ್ಗೆ 11.30 ಗಂಟೆಗೆ ನಡೆಯುವುದು.

ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ ಶ್ರೀ ಮಹಾಗಣಪತಿ ಪೂಜಾ, ರಥಸಪ್ತಮಿ ಪ್ರಯುಕ್ತ ಶ್ರೀ ಸೂರ್ಯನಾರಾಯಣ ಪೂಜೆ, ಶ್ರೀಮಾತಾ ಅನ್ನಪೂರ್ಣೇಶ್ವರಿ ರಥೋತ್ಸವ ಪ್ರಯುಕ್ತ ಹೋಮಾದಿಗಳು, ರಥಕ್ಕೆ ಕುಂಭಾಭಿಷೇಕ, ಬಲಪ್ರದಾನ, ರಥಾಲಂಕಾರ, ಶ್ರೀಮಾತಾ ಅನ್ನಪೂರ್ಣೇಶ್ವರಿ ಅಮ್ಮನವರ ಚರಮೂರ್ತಿಯೊಂದಿಗೆ ರಥೋತ್ಸವ, ಮಹಾದ್ವಾರ ಪ್ರದಕ್ಷಿಣೆ, ಮಹಾಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ ನಡೆಯುವುದು.

ಶಾಸಕ ಡಾ. ಶ್ರೀ ಶಾಮನೂರು ಶಿವಶಂಕರಪ್ಪ ಮತ್ತು ಕುಟುಂಬದವರು, ಶಾಸಕ ಎಸ್.ಎ ರವೀಂದ್ರನಾಥ್, ಸಂಸದ ಜಿ.ಎಂ. ಸಿದ್ದೇಶ್ವರ ಮತ್ತು ಇತರೆ ಗಣ್ಯರು ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ.ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 18.02.2021 ರಂದು ಗುರುವಾರ ನಿಧನರಾದ ಖ್ಯಾತ ಅನಸ್ತೇಷಿಯಾ ತಜ್ಞರೂ, ಎಸ್.ಎಸ್.ಐ.ಎಂ.ಎಸ್ ಅಂಡ್ ಆರ್.ಸಿ ಹಾಗೂ ಜೆ.ಜೆ.ಎಂ. ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರೂ ಮತ್ತು ನಮ್ಮ ಕೇಂದ್ರದ ಮಾಜಿ ಉಪಾಧ್ಯಕ್ಷರಾದ

**ಶ್ರೀ ಡಾ.ಡಿ. ಎಂ.ಜಿ. ಶಿವಾನಂದ**

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಆಡಳಿತ ಮಂಡಳಿ ಸದಸ್ಯರು ಹಾಗೂ ಸರ್ವ ಸದಸ್ಯರು
ದಾವಣಗೆರೆ ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಸೆಂಟರ್
ವಿದ್ಯಾನಗರ, ದಾವಣಗೆರೆ




# 23 ರಿಂದ ರಸ್ತೆ ಸಂಚಾರ ಗಣತಿ

ದಾವಣಗೆರೆ, ಫೆ. 18 - ರಸ್ತೆ ಸಂಚಾರ ಗಣತಿಯು ಇದೇ ದಿನಾಂಕ 23 ರಿಂದ 2 ದಿನಗಳ ಕಾಲ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಆಯ್ದ ಗಣತಿ ಕೇಂದ್ರಗಳಲ್ಲಿ ನಡೆಯಲಿದೆ

ಹೆದ್ದಾರಿ ಯೋಜನೆಯನ್ನು ರೂಪಿಸಲು, ಹಾಲಿ ಇರುವ ರಸ್ತೆಗಳನ್ನುಮೇಲ್ದರ್ಜೆಗೇರಿಸಲು, ರಸ್ತೆ ಮೇಲ್ಮೈ ಸುಧಾರಿಸಲು, ರಸ್ತೆಗಳನ್ನು ಅಗಲಗೊಳಿಸಲು, ವಾಹನಗಳ ಸಂಚಾರವನ್ನು ಸುಗಮಗೊಳಿಸಲು, ಸಂಚಾರದಲ್ಲಿ ಸುರಕ್ಷತೆ ಉತ್ತಮಪಡಿಸಲು, ಅಪಘಾತಗಳನ್ನು ನಿವಾರಿಸಲು, ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಈ ರಸ್ತೆ ಗಣತಿಯಲ್ಲಿ ಅವಶ್ಯ ಅಂಕಿ ಅಂಶ ಮಾಹಿತಿ ಸಂಗ್ರಹಿಸಲಾಗುವುದು.

AARSHIRAJ
Builders & Developers Ltd.
A New Venture in the Urban Development & Shelter Building
GSTIN: 29AASCA2527K1Z7 CIN: U45202KA2019PLC124080 PAN: AASCA2527K

ದಾವಣಗೆರೆ - ಹರಿಹರ ಪ್ರಾಧಿಕಾರದಿಂದ ಅನುಮೋದನೆ ಆಗಿರುವ ಸುಲಭ ಕಂತುಗಳಲ್ಲಿ ಸೈಟುಗಳು ಲಭ್ಯವಿರುತ್ತವೆ.

**ಆರ್ಶಿರಾಜ್ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಲಿಮಿಟೆಡ್ ಹೆಮ್ಮೆಯಿಂದ ಸಮರ್ಪಿಸುತ್ತಿದ್ದಾರೆ.**

ಸುಂದರ, ಸ್ವತಂತ್ರ ಮನೆಗಳು ನಿಮಗಾಗಿ 20x40 ನೆಲಮಹಡಿ ರೂ. 20,00,000/- (ಸೈಟ್ ಮತ್ತು ಬಿಲ್ಡಿಂಗ್ ಸೇರಿ). ಕೇವಲ ರೂ. 2,00,000/- ಪಾವತಿಯೊಂದಿಗೆ

**ನಿಮ್ಮ ಕನಸಿನ ಮನೆಯನ್ನು ಬುಕ್ ಮಾಡಿಕೊಳ್ಳಲು ಸುವರ್ಣಾವಕಾಶ.**

ಉಳಿದ ಮೊತ್ತವನ್ನು ಹಂತವಾಗಿ ಪಾವತಿಸಿ ಮತ್ತು ಕಟ್ಟಡ ನಿರ್ಮಾಣ ಆರ್ಥಿಕ ನೆರವನ್ನು ಬಡ್ಡಿ ಇಲ್ಲದೆ 120/180 ಸುಲಭ ಕಂತುಗಳಲ್ಲಿ ಪಾವತಿಸಿ.

ನಗರದ ಪ್ರಮುಖ ಬಡಾವಣೆಯಲ್ಲಿ :
ಶ್ರೀ ಸಾಯಿಬಾಬಾ ಲೇಔಟ್, ಸೇಂಟ್ ಮೇರಿಸ್ ಕಾನ್ವೆಂಟ್ ಸ್ಕೂಲ್ ಹಿಂಭಾಗ, ಹರಪನಹಳ್ಳಿ ರಸ್ತೆ, ಹರಿಹರ, ದಾವಣಗೆರೆ-577 601. ಫೋ. : +91-9380437609
ಬುಕ್ಕಿಂಗ್ ಸಂಪರ್ಕಿಸಿ : ಶ್ರೀ ಕಲ್ಲೇಶ್ವರ ಕಾಂಪ್ಲೆಕ್ಸ್, 1 ನೇ ಮಹಡಿ, ಗಾಂಧಿ ಮೈದಾನದ ಮುಂಭಾಗ ವಿದ್ಯಾಶ್ರೀ ಬೇಕರಿ ಮೇಲೆ, ಪಿ.ಬಿ. ರೋಡ್, ಹರಿಹರ-577 601. www.aarshiraj.com

**ಬೇಕಾಗಿದ್ದಾರೆ :**
ಯಾವುದೇ ಪದವಿಯನ್ನು ಪಡೆದಿರುವ ಯುವಕ ಮತ್ತು ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte